ಮಹತ್ವದ್ದಾಗಿರುವುದರಿಂದ ಇದು ಸಂಯುಕ್ತ ಪರಿಶೀಲನಾ ಸಮಿತಿಯ ಮುಂದೆ ಬರುವುದು ಅಗತ್ಯ ಎಂದು ಸೂಚಿಸಿದ್ದಾರೆ. ಆದುದರಿಂದ ಈ ವಿಧೇಯಕವನ್ನು ಸಂಯುಕ್ತ ಪರಿಶೀಲನಾ ಸಮಿತಿ ಒಪ್ಪಿಸಬೇಕೆಂದು ಹಾಗೂ ಅದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆ ಪಡೆಯಬೇಕೆಂದು ಮತ್ತು ಈ ಕೆಳಕಂಡ ವಿಧಾನಸಭೆಯ ಸದಸ್ಯರು ಈ ಸಮಿತಿಗೆ ಸದಸ್ಯರಾಗಿರುತ್ತಾರೆಂಬ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ.

೧. ಶ್ರೀಮತಿ ಚಂದ್ರಪ್ರಭಾ ಅರಸ್
೨. ಶ್ರೀ ಮಲ್ಲಾರಿಗೌಡ ಪಾಟೀಲ್
೩. ಶ್ರೀ ಎಸ್. ಎಂ. ಯಾಹ್ಯಾ
೪. ಶ್ರೀಮತಿ ಮೋಟಮ್ಮ
೫. ಶ್ರೀ ಪ್ರತಾಪಚಂದ್ರ ಶೆಟ್ಟಿ
೬. ಶ್ರೀ ಶ್ರೀ ರಂಗದೇವರಾಯಲು
೭. ಶ್ರೀ ಎಲ್. ಆರ್. ಶಿವರಾಮೇಗೌಡ
೮. ಶ್ರೀ ಆರ್. ವಿ. ದೇಶಪಾಂಡೆ
೯. ಶ್ರೀ ಬಿ. ಎಸ್. ಯಡಿಯೂರಪ್ಪ
೧೦. ಶ್ರೀ ಎಂ. ಎಸ್. ಪಾಟೀಲ್
೧೧. ಶ್ರೀ ಕಾಗೋಡು ತಿಮ್ಮಪ್ಪ
೧೨. ಶ್ರೀ ಸಿ. ಬೈರೇಗೌಡ

ಅಧ್ಯಕ್ಷರು.—ಈಗ ಪ್ರಸ್ತಾವ ಏನೆಂದರೆ,

"೧೯೯೦ನೇ ಇಸವಿಯ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಈ ಕೆಳಗೆ ನಮೂದಿಸಿದ ವಿಧಾನಸಭಾ ಸದಸ್ಯರನ್ನೊಳಗೊಂಡ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂಬ ಪ್ರಸ್ತಾವವನ್ನು ಅಂಗೀಕರಿಸುವುದು.

ಸದಸ್ಯರುಗಳ ಹೆಸರುಗಳು.

೧. ಶ್ರೀಮತಿ ಚಂದ್ರಪ್ರಭಾ ಅರಸ್
೨. ಶ್ರೀ ಮಲ್ಲಾರಿಗೌಡ ಪಾಟೀಲ್
೩. ಶ್ರೀ ಎಸ್. ಎಂ. ಯಾಹ್ಯಾ
೪. ಶ್ರೀಮತಿ ಮೋಟಮ್ಮ
೫. ಶ್ರೀ ಪ್ರತಾಪಚಂದ್ರ ಶೆಟ್ಟಿ
೬. ಶ್ರೀ ಶ್ರೀರಂಗದೇವರಾಯಲು
೭. ಶ್ರೀ ಎಲ್. ಆರ್. ಶಿವರಾಮೇಗೌಡ
೮. ಶ್ರೀ ಆರ್. ವಿ. ದೇಶಪಾಂಡೆ
೯. ಶ್ರೀ ಬಿ. ಎಸ್. ಯಡಿಯೂರಪ್ಪ
೧೦. ಶ್ರೀ ಎಂ ಎಸ್. ಪಾಟೀಲ್
೧೧. ಶ್ರೀ ಕಾಗೋಡು ತಿಮ್ಮಪ್ಪ
೧೨. ಶ್ರೀ ಸಿ. ಬೈರೆಗೌಡ

ಪ್ರಸ್ತಾವವನ್ನು ಅಂಗೀಕರಿಸಲಾಯಿತು

ಮಸೂದೆಯನ್ನು ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಲಾಯಿತು. ಹಾಗೂ ಈ ಸಮಿತಿಯು ಮಾರ್ಚ್ ೩೧ ೧೯೯೧ರ ಒಳಗೆ ವರದಿಯನ್ನು ಸಭೆಗೆ ಸಲ್ಲಿಸಬೇಕು.

ಕಂದಾಯ ಮಂತ್ರಿಗಳ ಹೇಳಿಕೆ

ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿಬಗ್ಗೆ.

† ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ದಿನ ಹೇಳಿದಹಾಗೆ ಈ ಬರಗಾಲ ಪರಿಸ್ಥಿತಿಯ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ತಾವು ಆದೇಶ ನೀಡಿದ್ದೀರಿ. ಅದರ ಪ್ರಕಾರ ನಾನು ಇಂದು ಒಂದು ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆ.

(ಶ್ರೀಮತಿ ದಮಯಂತಿ ಬೋರೇಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

In the pre-monsoon period during the year, 114 out of 175 taluks in the State, received excess/normal rain: The south-west monsoon commenced on time with fairly wide-spread rain over northern and coastal parts of the State. During the month of June, rain-fall in the State was normal, but not well distributed over all parts of the State, While some districts of north intrior Karnataka and coastal region received heavy rainfall, the district of south interior Karnataka received scanty rain. During the month of July similar situation continued and the districts of southern Karnataka faced dry spell for a long period During August 1990, the districts of northern Karnataka, Malnad, Coastal region received excess/ normal rainfall while it continued to be difieient in major parts of south interior Karnataka. During the month of September, there was scanty rainfall in major parts of Bangalore, Kolar, Chickmagalur, Gulbarga and Coastal districts.

As a result of good pre-monsoon showers agricultural operations like prepratory tillage sowing of early khariff crop were taken-up in early Khariff districts. But due to failure of rain in these parts, the early sown crops faced moisture stress and later withered at flowering stage.

In northern parts, the Khariff season progressed briskly while in southern districts, the situation remained grim due to insufficient rain. The sowing was very slow in these dry land parts. The overall situation in Gulbarga, Belgaum divisions and coastal diutricts was normal.

The total area sown upto end of khariff season (30-9-1990) is 70.15 lakh heets., accounting for 99% of normal khariff area of 70.80 lakh hects. Out of the total sown area of 19.41 lakh hectsa is affected due to dry spells and 2.39 lakh hects. due to heavy downpour The total area affected in rainfed region is 27.7%,

In general, the condition of standing khariff crops is satisfactory under irrigation and wherever adequate rain is received. However in dry land parts of Mysore, Mandya, Chitradurga, Hassan, Bellary, parts of Dharwad and Belgaum districts crops continue to suffer due to moisture stress owing to inadequate rain.

Government has been reviewing the seasonal conditions in the State every fortnight by obtaining reports from the Deputy Commissioners, Drought Monitoring Cell, National Remote Sensing Agency, Hyderabad, India Metereological Department, Department of Agriculture, Directorate of Econmics and Statistics, etc.

Drinking water scarcity is felt in many parts of the State. A sum of Rs. 459.00 lakhs has already been released for the said purpose under 'Calmity Relief Fund'. However, it is felt that the scarcity would be more acute during the coming months and particularly during the months of February to April 1991.

Further, Government has decided that from the normal Rural Drinking Water Supply schemes. a sum of Rs. 3-00 crores be allocated for each Division from the Zill Parishad funds for providing drinking water to the affected areas. The funds will remain with the Zilla Parishads but it will be implemented by the Deputy Commissioner after consulting the Zilla parishad,

Government has released a total amount of Rs. 674.00 lakhs under 'Calamity Relief Fund' for taking-up employment programmes to the Deputy Commissioners. The Deputy Commissioners have taken-up the programmes in consultation with the concerned Zilla-parishads and other Departments.

Uuder the normal plan schemes i.e., Jawahar Rozgar Yojana, drinking water supply, employment, etc.. programmes are also taken-up. During drought periods, additional programmes, to supplement the plan programmes, are taken up releasing funds under drought relief. The implementing departments have been directed to take-up drought relief programmes dovetailing them with the normal plan programmes.

Fodder scarcity has been noticed in certain districts. In order to meet the requirement of fodder arrangements have been made to obtain fodder from the Karnataka State Forest Industries Corporation and supply to the affected districts.

On account of in-adequate rainfall, parts of 100 taluks in 15 districts in the State are experience a drinking water problem, employment to agricultural labourers. Government has so far released a sum of Rs. 1.169,00 lakhs for tackling scarcity in affected areas in addition the normal plan schemes such as Jawahar Rozgar Yojana. Drought Prone Area Programme, Rural Water Supply. Social Forestry, etc.

ಶ್ರೀ ಎಂ.ಪಿ. ವೆಂಕಟೇಶನ್.—ಮಾನ್ಯ ಅಧ್ಯಕ್ಷಣೀಯವರೇ ಈ ಸದನದಲ್ಲಿ ಹಲವಾರು ಬಾರಿ ತಾವು ಕನ್ನಡದಲ್ಲಿ ಉತ್ತರ ಒದಗಿಸಬೇಕೆಂದು ಹೇಳಿದ್ದೀರಿ. ಆದರೆ ಮಾನ್ಯ ಮಂತ್ರಿಗಳು ಇಂಗ್ಲೀಷ್‌ನಲ್ಲಿ ಉತ್ತರ ಕೊಟ್ಟರು ಇದು ಸತತವಾಗಿ ನಡೆದುಕೊಂಡು ಬರುತ್ತಿದೆ. ಕನ್ನಡದಲ್ಲಿ ಉತ್ತರ ಕೊಡುವುದಕ್ಕೆ ಇವರಿಗೇನು ತೊಂದರೆ ? ನಮಗೂ ಸಹ ಇಂಗ್ಲೀಷ್‌ನಲ್ಲಿರುವ ಮಾಹಿತಿಗಳನ್ನೇ ಕಳಿಸಿಕೊಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷಣೀಯವರೇ, ನಾನು ಪದೇ ಪದೇ ಹೇಳಿ ಹೇಳಿ ಸಾಕಾಗಿ ಹೋಗಿದೆ. ನಾನಂ ಎಷ್ಟು ಸಾರಿ ಕೇಳುವುದು. ಅದೇನೋ ಒಂದು ಗಾದೆ ಇದೆಯಲ್ಲ,

ರಾಯರ ಕುದುರೆ ಬರು ಬರುತ್ತಾ ಕತ್ತೆ ಆಯಿತು ಅಂದ ಹಾಗೆ ಆಗಿದೆ. ಇಂಗ್ಲೀಷ್‌ನಲ್ಲಿ ಏತಕ್ಕೆ ಓದ ಬೇಕು ? ಕನ್ನಡದ ಪ್ರತಿಯನ್ನು ಏತಕ್ಕೆ ಒದಗಿಸಬಾರದು ? ಸರ್ಕಾರಕ್ಕೆ ಏತಕ್ಕೆ ಈ ಪರಿಸ್ಥಿತಿ ಬಂತು ? ಕನ್ನಡದ ಉದ್ಧಾರವೆಂದು ಹೇಳುತ್ತಾರೆ, ಕನ್ನಡ ಆಡಳಿತ ಭಾಷೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ಇಂಗ್ಲೀಷ್‌ನಲ್ಲಿ ಓದುತ್ತಾರೆ,

ನಮಗಂತೂ ಇದು ಬೇಕಾಗಿಲ್ಲ. ಇದನ್ನು ಧಿಕ್ಕರಿಸಿ ಈ ಹೇಳಿಕೆಯನ್ನು ನಾನು ಹರಿದು ಹಾಕುತ್ತಿದ್ದೇನೆ. ಇನ್ನು ಮೇಲೆ ಈ ತರಹ ಇಂಗ್ಲೀಷ್‌ನಲ್ಲಿ ಹೇಳಿಕೆ ಕೊಡಬಾರದು. ಇದನ್ನು ಗಂಭೀರವಾಗಿ ತೆಗೆದುಕೊಂಡು ಇನ್ನು ಮುಂದೆ ಕನ್ನಡದಲ್ಲೇ ಕಾಪಿಗಳನ್ನು ನಮಗೆ ಕೊಡಬೇಕು.

(ಹೇಳಿಕೆಯ ಪ್ರತಿಗಳನ್ನು ಈ ಸಂದರ್ಭದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಹರಿದು ಹಾಕಿದರು.)

ಛೇರ್ಮನ್ರ್.—ಇನ್ನು ಮುಂದೆ ಹೇಳಿಕೆಗಳನ್ನು ಕನ್ನಡದಲ್ಲೇ ಕೊಡಿಸುತ್ತೇವೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಇದು ಕನ್ನಡ ರಾಜ್ಯ ಎಂದು ಹೇಳುತ್ತಾರೆ ಆದರೆ ಎಲ್ಲಾ ವ್ಯವಹಾರವನ್ನು ಇಂಗ್ಲೀಷ್‌ನಲ್ಲಿ ಮಾಡುತ್ತಾರೆ.

ಶ್ರೀ ಎಂ. ಪಿ. ವೆಂಕಟೇಶ್.—ಸರ್ಕಾರದಿಂದ ಬರುವ ಉತ್ತರಗಳಿಗೂ ಅಧಿಕಾರಿಗಳೇ ಸಹಿ ಹಾಕುತ್ತಿದ್ದಾರೆ. ಮತ್ತೆ ಆ ಉತ್ತರಗಳು ಇಂಗ್ಲೀಷ್‌ನಲ್ಲೇ ಇರುತ್ತವೆ. ಮಂತ್ರಿಗಳು ಅದೇ ಉತ್ತರವನ್ನು ಓದುತ್ತಾರೆ.

ಶ್ರೀ ಎಂ. ವಂಲ್ಲಿಕಾರ್ಜುನ ಖರ್ಗೆ.—ಇನ್ನು ಮುಂದೆ ಎಲ್ಲಾ ಉತ್ತರಗಳನ್ನು ಕನ್ನಡದಲ್ಲಿ ಕೊಡುತ್ತೇವೆ. ಈಗ ಕೊಟ್ಟಿರುವ ಉತ್ತರವನ್ನೂ ಕನ್ನಡಕ್ಕೆ ತರ್ಜುಮೆ ಮಾಡಿ ಕೊಡಿ ಎಂದರೂ ಹಾಗೇ ಮಾಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇದು ಒಬ್ಬ ಸಚಿವರ ಪ್ರಶ್ನೆಯಲ್ಲ. ಇದು ಇಡೀ ಸರ್ಕಾರದ ಪ್ರಶ್ನೆ. ಸರ್ಕಾರಕ್ಕೆ ಒಂದು ನಿರ್ಧಾರ ಬೇಕು, ಒಂದು ನೀತಿ ಬೇಕು. ಇಲ್ಲ ನಾವು ಕನ್ನಡ ಭಾಷೆಯಲ್ಲಿ ಆಡಳಿತ ಮಾಡುವುದಿಲ್ಲವೆಂದು ಹೇಳಲಿ. ಕನ್ನಡ ಆಡಳಿತ ಭಾಷೆ ಮಾಡುತ್ತೇವೆಂದು ಹೇಳಿರುವುದು ಒಣ ಮಾತು, ಬುರುಡೆ ಮಾತು ಎಂದು ಹೇಳಲಿ. ನಾನು ಯಾರೋ ಒಬ್ಬರು ಮಂತ್ರಿಗಳನ್ನು ಅಕ್ಷೇಪಣೆ ಮಾಡುತ್ತಿಲ್ಲ. ಸರ್ಕಾರದ ಒಟ್ಟು ಜವಾಬ್ದಾರಿ ಇದಾಗಬೇಕು. ನಾವು ಏನಾದರೂ ಕೇಳುವುದಕ್ಕೆ ಹೋದರೆ ಕೆಲವರಿಗೆ ಒಂದು ನೀತಿ ನೋವಾಗುತ್ತದೆ.

ಛೇರ್ಮನ್.—ಅನಿವಾರ್ಯ ಸಂದರ್ಭಗಳನ್ನು ಬಿಟ್ಟು ಇನ್ನೆಲ್ಲಾ ಸಂದರ್ಭಗಳಲ್ಲೂ ಕನ್ನಡಲ್ಲೇ ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್.—ಕಳೆದ ಅಧಿವೇಶನದಲ್ಲೂ ಇದೇ ರೀತಿಯಾಗಿತ್ತು.

ಶ್ರೀ ವಾಟಾಳ್ ನಾಗರಾಜ್.—ನಿನ್ನೆ ದಿವಸ ಕೊಟ್ಟಿದ್ದ ಪಟ್ಟಿಸೊದೆಯೂ ಇಂಗ್ಲೀಷ್‌ನಲ್ಲೇ ಇತ್ತು. ಎಲ್ಲಾ ಬರೀ ಇಂಗ್ಲೀಷ್‌ನಲ್ಲಿ ಕೊಡುತ್ತಿದ್ದಾರೆ.

ಛೇರ್ಮನ್.—ಇನ್ನು ಮೇಲೆ ಎಲ್ಲವನ್ನು ಕನ್ನಡದಲ್ಲೇ ಕೊಡಿಸುತ್ತೇವೆ. ತಾವುಗಳು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್.—ನೋಡಿ ಈ ಮಸೂದೆಯನ್ನು ಮೇಲೆ ಕರ್ನಾಟಕ ರಾಜ್ಯ ಎಂದು ಕನ್ನಡದಲ್ಲಿ ಇದೆ. ಕೆಳಗೆ ಎಲ್ಲಾ ಇಂಗ್ಲೀಷ್ ಇದೆ.

ಛೇರ್ಮನ್.—ನೋಡಿ, ಅನಿವಾರ್ಯ ಸಂದರ್ಭದಲ್ಲಿ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಆಂತರ ಅನಿವಾರ್ಯ ಸಂದರ್ಭ ಏನು ಬಂದಿದೆ ? ಏಕೆ ಸರ್ಕಾರದಲ್ಲಿ ಕನ್ನಡ ಬರಹಗಾರರಿಲ್ಲವೆ ? ಕನ್ನಡ ಶೀಘ್ರಲಿಗಾರರಿಲ್ಲವೆ ? ಕನ್ನಡ ಬರೆಯುವವರು ಇಲ್ಲವೆ ? ಇನ್ನು ಮುಂದೆ ಎಲ್ಲಾ ವಿಷಯವೂ ಕನ್ನಡದಲ್ಲೇ ಬರಬೇಕು.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಎಲ್ಲವನ್ನೂ ಕನ್ನಡದಲ್ಲೇ ಮಾಡಿದರೆ ಪ್ರತಿಯೊಬ್ಬರಿಗೂ ಗೊತ್ತಾಗಿಬಿಡುತ್ತದೆಂದು ಇವರು ಇಂಗ್ಲೀಷ್‌ನಲ್ಲಿ ಮಾಡುತ್ತಾರೆ. ಎಲ್ಲವನ್ನು ಇಂಗ್ಲೀಷ್‌ನಲ್ಲಿ ಮಾಡುವುದಾದರೆ ಇದು ಅತಿರೇಕದ ಪರಮಾವಧಿಯಾಗುತ್ತದೆ.

ಶ್ರೀ ಎಂ.ಪಿ. ವೆಂಕಟೇಶ್.—ಬಿಲ್‌ನ ಮುಂದಿನ ಪುಟದಲ್ಲಿ ಮಾತ್ರ ಕರ್ನಾಟಕ ರಾಜ್ಯ ಪತ್ರ ಎಂದು ಕನ್ನಡದಲ್ಲಿ ಇದೆ. ಮಿಕ್ಕಿದ್ದೆಲ್ಲಾ ಇಂಗ್ಲೀಷ್‌ನಲ್ಲೇ ಇದೆ.

ಛೇರ್ಮನ್.—ಆಯಿತು, ಕನ್ನಡ ಅನುವಾದವನ್ನು ಸಹ ತರಿಸಿಕೊಡುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್.—ಕನ್ನಡದಲ್ಲಿ ಎಲ್ಲಾ ಕೊಟ್ಟರೆ ಪ್ರತಿಯೊಬ್ಬರಿಗೂ ಗೊತ್ತಾಗುತ್ತದೆಂದು ಇಂಗ್ಲೀಷ್‌ನಲ್ಲಿ ಕೊಡುತ್ತಾರೆ. ಇಂಗ್ಲೀಷ್‌ನಲ್ಲಿ ಕೊಟ್ಟರೆ ಬಹಳ ಜನಕ್ಕೆ ಗೊತ್ತಾಗುವುದಿಲ್ಲ. ಎಲ್ಲರಿಗೂ ಗೊತ್ತಾಗಬಾರದೆಂದು ಇವರು ಇಂಗ್ಲೀಷ್‌ನಲ್ಲಿ ಕೊಡುತ್ತಾರೆ. ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೆ ಇಂಗ್ಲೀಷ್‌ನಲ್ಲಿ ಕೊಡುತ್ತಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ.—ಸರ್ಕಾರಕ್ಕೆ ಇದರ ಬಗ್ಗೆ ತೀವ್ರವಾದ ಎಚ್ಚರಿಕೆಯನ್ನು ಮಾನ್ಯ ಅಧ್ಯಕ್ಷರು ಕೊಡಬೇಕು. ಕನ್ನಡ ಟೈಪ್‌ರೈಟರ್‌ಗಳು ಇವೆ. ಕನ್ನಡ ಬರೆಯತಕ್ಕಂಥವರು ಇದ್ದಾರೆ. ಇಷ್ಟೆಲ್ಲಾ ಇದ್ದೂ ಇನ್ನೂ ಇಂಗ್ಲೀಷ್‌ನಲ್ಲಿ ಹೇಳಿಕೆಗಳನ್ನು ಕೊಡುವುದು ಸರಿಯಲ್ಲ. ಇನ್ನು ಮುಂದೆ ಎಲ್ಲವೂ ಕನ್ನಡದಲ್ಲಿಯೇ ಹೇಳಿಕೆಗಳು ಬರಬೇಕೆಂದು ಮಾನ್ಯ ಅಧ್ಯಕ್ಷರು ಆದೇಶವನ್ನು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿ ಬರುವ ಗಮನ ಸೆಳೆಯುವ ಸೂಚನೆಗೆ ಕೊಡುವ ಉತ್ತರ ಪತ್ರಗಳನ್ನು ನಾನು ಎಚ್ಚರಿಕೆಯಿಂದ ನೋಡುತ್ತಿದ್ದೇನೆ. ಇದನ್ನು ನಾನು ಹೇಳಿದರೆ ಕೆಲವರಿಗೆ ಮುಖ ಕೆಂಪಗಾಗುತ್ತದೆ. ನನಗೆ ಇದರಿಂದ ನೋವಾಗುತ್ತದೆ. ಏನಾದರೂ ಮಾತನಾಡುವುದಕ್ಕೆ ಹೋದರೆ ಅವರು ಮೇಲೆ ಬರುತ್ತಾರೆ, ಆ ಭೀತಿಯಿಂದ ಏನಾದರೂ ಹೇಳುವುದಕ್ಕೆ ಹೋಗದೆ ಸುಮ್ಮನೆ ಇರಬೇಕಾಗುತ್ತದೆ.

೧೧.೩೦ ಎ.ಎಂ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ.—ಮಾನ್ಯ ಸಭಾಧ್ಯಕ್ಷಣಿಯವರೇ, ಈಗ ಸ್ವಲ್ಪ ಹೊತಿನಿಂದ ಸದಸ್ಯರು ಭಾಷೆ ಬಗ್ಗೆ ಮಾತನಾಡುತ್ತಿದ್ದಾರೆ. ಇದರ ಬಗ್ಗೆ ನಾವು ಸರಿಯಾದ ಗೆರೆ ಎಳೆದು ಕೊಳ್ಳುವುದು ಅತ್ಯಂತ ಅವಶ್ಯಕ. ಜನರಿಗೆ ಅರ್ಥವಾಗುವಂತಹ ಭಾಷೆಯಲ್ಲಿ ಎಲ್ಲಿ ವ್ಯವಹಾರಗಳು ನಡೆಯಬೇಕು. ಅದರಲ್ಲೂ ವಿಶೇಷವಾಗಿ ಇವೊತ್ತು ಬರಗಾಲದ ಬಗ್ಗೆ ಒಂದು ಹೇಳಿಕೆ ಬಂದಿದೆ. ಇಂಗ್ಲೀಷ್ ಗೊತ್ತಿಲ್ಲದೇ ಇರುವ ರೈತರು ಬಹಳ ಜನ ಬಂದಿದ್ದಾರೆ. ನಾವು ಏನು ಮಾಡುತ್ತಿದ್ದೇವೆಂದು ನೋಡುವುದಕ್ಕಾಗಿ. ಇಲ್ಲಿ ನಾವು ಈ ಬರಗಾಲದ ಕಾರ್ಯ ಕ್ರಮದ ಬಗ್ಗೆ ಈ ಎಷ್ಟು ಜಾಣತನ ಉಪಯೋಗಿಸಿದ್ದೇವೆ ಅಂದರೆ ಹಣ ಕೊಟ್ಟಿರುವುದನ್ನು ಹೇಳುತ್ತಾ ೪೫೯ ಲಕ್ಷ ಎಂದು ಹೇಳಂತ್ತೇವೆ. ೬೭೪ ಲಕ್ಷ ಎಂದು ಹೇಳುತ್ತೇವೆ. ಒಟ್ಟು ಎಲ್ಲ ಸೇರಿಸಿ ೧೭೫ ತಾಲೂಕುಗಳಿಗೆ ಭಾಗಶಃ ಮಾಡಿದರೆ ೮ ಲಕ್ಷ ಬರುತ್ತದೆ. ಇದನ್ನು ಮುಚ್ಚಿಡುವುದಕ್ಕಾಗಿ ಇಂಗ್ಲಿಷ್‌ನ್ನು ಬಳಸುತ್ತಿದ್ದೇವೆ ಇದು ಬಹಳ ದಿವಸದಿಂದ ನಡೆಯುತ್ತಿದೆ. ಈ ಮೊದಲು ನಾವು ಸಂಸ್ಕೃತದಲ್ಲಿ ವ್ಯವಹಾರ ಮಾಡಿದ್ದೇವೆ.

ಛೇರ್ಮನ್.—ಬರಗಾಲದ ಬಗ್ಗೆ ತಾವು ಮಾತನಾಡುವಾಗ ಈ ವಿವರಗಳನ್ನು ಕೊಡಬಹುದು.

(ಗೊಂದಲ)

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಇವತ್ತಿನಿಂದಾದರೂ ಒಂದು ಗೆರೆ ಎಳೆದುಕೊಳ್ಳಬೇಕು. ೨೩–೧೧–೧೯೯೦ ರಿಂದ ಆ ಚೆಗೆ ಈ ಸದನದಲ್ಲಿ ನಮ್ಮೆಲ್ಲ ವ್ಯವಹಾರಗಳನ್ನೂ ಜನಸಾಮಾನ್ಯರಿಗೆ ಅರ್ಥವಾಗುವಂತಹ ಕರ್ನಾಟಕದ ಜನರ ಭಾಷೆಯಲ್ಲೇ ನಡೆಸುತ್ತೇವೆಂದು ತಾವು ತೀರ್ಮಾನ ಮಾಡಬೇಕು ಇದರ ಬಗ್ಗೆ ನಾವು ಬಹಳ ಹುಡುಗಾಟಿಕೆ ಮಾಡುತ್ತಿದ್ದೇವೆ. ಇದು ಪ್ರಜಾತಂತ್ರ ಎನಿಸಿಕೊಳ್ಳುವುದಿಲ್ಲ ಇದು ಹಿಂದಿನಿಂದಲೂ ನಡೆಸಿಕೊಂಡು ಬಂದಿರುವುದೇ ಆಗಿದೆ. ಜನರಿಗೆಳಿಗೆ ಅರ್ಥವಾಗದ ಭಾಷೆಯಲ್ಲಿ ಆಡಳಿತ ನಡೆಸುವುದು. ಹಿಂದೆ ಸಂಸ್ಕೃತದಲ್ಲಿ, ಈಗ ಇಂಗ್ಲಿಷಿನಲ್ಲಿ ಆಡಳಿತ ನಡೆಯುತ್ತಿದೆ. ಏತಕ್ಕಾಗಿ ಎಂದು ನಮಗೆಲ್ಲ ಗೊತ್ತಿದೆ. ಪ್ರಾಮಾಣಿಕವಾದ ತೀರ್ಮಾನ ನಾವು ಈ ದಿಶೆಯಲ್ಲಿ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ನಮ್ಮನ್ನು ಸಹ ಜನ ಮೋಸಗಾರರು ಎಂದು ಕರೆಯುತ್ತಾರೆ. ಆ ಬಗ್ಗೆ ತಾವು ಸೂಕ್ತ ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಛೇರ್ಮನ್.—ಕನ್ನಡದಲ್ಲಿ ಒದಗಿಸಿಕೊಡುತ್ತೇವೆ. ಆದರೆ ಕನ್ನಡ ಬರದೇ ಇರುವವರು ಕೆಲವು ಜನ ಇದ್ದಾರೆಂಬುದನ್ನು ಮರೆಯಬೇಡಿ,

ಶ್ರೀ ವಾಟಾಳ್ ನಾಗರಾಜ್ —ಸಮಗ್ರವಾಗಿ ಕನ್ನಡದಲ್ಲೇ ಇನ್ನು ಮುಂದೆ ನಡೆಯಬೇಕು.

ಛೇರ್ಮನ್.—ಆದಷ್ಟೂ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷಣಿಯವರೇ, ಸರ್ಕಾರದ ಪರವಾಗಿ ಇಬ್ಬರು ಸಚಿವರಿದ್ದಾರೆ. ಈ ಬಗ್ಗೆ ಸರ್ಕಾರದ ನಿಲುವು ಏನು ಎಂದು ಹೇಳಲಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷಣಿಯವರೇ, ಸರ್ಕಾರದ ಕಾರ್ಯಕಲಾಪಗಳು ಸದನದಲ್ಲಿ ಕನ್ನಡದಲ್ಲೇ ಆಗಬೇಕೆಂಬ ಕಳಕಳಿ ಏನಿದೆ ಅದು ಕೇವಲ ಒಂದು ರಾಜಕೀಯ ಪಕ್ಷಕ್ಕೆ ಹೊರತಾದಂತಲ್ಲ, ಇಡೀ ನಮ್ಮ ರಾಜ್ಯದ ಎಲ್ಲ ರಾಜಕೀಯ ಪಕ್ಷಗಳೂ, ಹಿಂದೆ ಅಧಿಕಾರಕ್ಕೆ ಬಂದಂಥ ಸರ್ಕಾರಗಳೂ ಹಾಗೂ ಹಾಲಿ ಈಗಿನ ಸರ್ಕಾರ ಇದಕ್ಕೆ ಬದ್ಧವಾಗಿದ್ದೇವೆ, ಈಗ ಆಕಸ್ಮಿಕವಾಗಿ ಅನಿವಾರ್ಯವಾಗಿ ನಡೆದುಬಿಟ್ಟಿದೆ. ತಾವು ಏನು ಸೂಚನೆ ಕೊಟ್ಟಿರುತ್ತೀರೋ ಅದರಂತೆ ಇನ್ನು ಮುಂದೆ ನಾವು ನಡೆದುಕೊಳ್ಳುತ್ತೇವೆ. ಪ್ರೊ॥ ನಂಜುಂಡಸ್ವಾಮಿ ಅವರು ಶ್ರೀ ವಾಟಾಳ್ ನಾಗರಾಜ್ ಅವರು ಶ್ರೀ ವೆಂಕಟೇಶ್ ಅವರು ಮತ್ತು ಶ್ರೀ ಶಿವರಾಮೇಗೌಡರು ಏನು ಕಳಕಳಿ ವ್ಯಕ್ತ ಪಡಿಸಿದ್ದೀರಿ, ಅದು ಸರ್ಕಾರದ ಹೃದಯಕ್ಕೆ ತಟ್ಟಿದೆ. ಅನಿವಾರ್ಯವಾಗಿ ಈಗ ಇಂಗ್ಲೀಷ್‌ನಲ್ಲಿ ಕೊಟ್ಟಿದ್ದರೂ ಸರ್ಕಾರದ ಸದುದ್ದೇಶವನ್ನು ತಾವು ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅಂತಹ ಅನಿವಾರ್ಯ ಪರಿಸ್ಥಿತಿ ಏನು ಒದಗಿದೆ ಹೇಳಿ ಇಲ್ಲಿ,

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಕನ್ನಡದಲ್ಲೇ ಆಡಳಿತ ಮಾಡಬೇಕೆಂಬುದಕ್ಕೆ ಸರ್ಕಾರ ಬದ್ಧವಾಗಿದೆ. ಇದು ನಿರ್ವಿವಾದ. ಸರ್ಕಾರ ತಪ್ಪಿ ಭಾವನೆಗಳನ್ನು ಅರ್ಥ ಮಾಡಿಕೊಂಡಿದೆ, ಇದನ್ನು ಇಲ್ಲಿಗೆ ಮುಕ್ತಾಯಗೊಳಿಸಬೇಕೆಂದು ಕೋರುತ್ತೇವೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯರು).—ಮಾನ್ಯ ಅಧ್ಯಕ್ಷಣಿಯವರೇ, ಈಗ ಕನ್ನಡದ ಕೆಲಸ ಆದದ್ದೆಷ್ಟು ಮತ್ತು ಆಗಬೇಕಾದೆಷ್ಟು ಇದನ್ನು ನಾವು ಜನಪ್ರತಿನಿಧಿಗಳಾಗಿ ಶಾಸನಸಭೆಯಿಂದ ಇದು ಪ್ರತಿಧ್ವನಿಯಾಗದಿದ್ದರೆ ಉಳಿದವರಿಗೆ ಏನು ಮಾರ್ಗದರ್ಶನ ಕೊಡಬೇಕು ಎಂಬುದನ್ನು ತಾವೇ ನಿರ್ಧರಿಸಬೇಕು. ಇಂದು ಬಹಳ ಮಂಖ್ಯಿವಾಗಿ ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿಯನ್ನು ಚರ್ಚೆ ಮಾಡುವುದಕ್ಕಾಗಿ ಸಮಯ ಸಿಕ್ಕಿತಲ್ಲ ಎಂದು ಸಂತೋಷ ಪಡಬೇಕಾಗಿದೆ. ಕಾರಣ ಏನೆಂದರೆ, ಕಳೆದ ಎರಡೂವರೆ ತಿಂಗಳಿಂದ ರಾಜ್ಯದಲ್ಲಿ ಜನಹಿತ ಕಾರ್ಯಕ್ಕೆ ಶಾಸನಸಭೆಗೂ ಸಮಯ ಇಲ್ಲ, ಸರ್ಕಾರಕ್ಕೂ ಸಮಯ ಇಲ್ಲ. ಸಮಯ ವೀಸೆಲಾದದ್ದು ಒಂದು ಕಡೆ ಮತೀಯ ಗಲಭೆಗಳು ಮತ್ತೊಂದು ಕಡೆ ರಾಜಕೀಯ ಕ್ಷೋಭೆ. ನಾವು ಈ ಚರ್ಚೆ ಪ್ರಾರಂಭ ಮಾಡುವಾಗ ಎರಡು ಸರ್ಕಾರಗಳು ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಬದಲಾವಣೆಯಾಗಿವೆ, ಆಳುವ ಪಕ್ಷ ಮಂತ್ರಿಮಂಡಲದ ವಿಸ್ತರಣೆ ಮಾಡಿತು. ಅದಾದರೂ ಪೂರ್ತಿಯಾಗಿದೆಯೋ ಎಂದರೆ ಅದೂ ಸಹ ಪೂರ್ತಿಯಾಗಿಲ್ಲ ಮತ್ತೊಂದು ಕಂತು ಬಾಕಿ ಇದೆ. ಅದಕ್ಕಾಗಿ ಕಾದು ಕೂತಿರುವ ಜನ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಯ್ಕೆಯಾದ ಒಂದು ಪಕ್ಷಕ್ಕೆ ಈ ದೇಶದ ಜನರ ಬಗ್ಗೆ ಕೆಲಸ ಮಾಡಲು ವ್ಯವಧಾನ ಇಲ್ಲ. ಕನಿಷ್ಠ, ಇಂತಹ ರಾಜ್ಯ ವ್ಯಾಪ್ತಿ ರೈತರ ಸಮಸ್ಯೆಗಳಿಗೆ ಒಂದು ಶಾಶ್ವತ ವ್ಯವಸ್ಥೆಯನ್ನಾದರೂ ಮಾಡಿದ್ದಾರೆಯೇ ಎಂದರೆ ತಿಂಗಳಿಗೆ ತಿಂಗಳಿಗೆ ಕಂದಾಯ ಸಚಿವರು ಬದಲಾವಣೆಯಾಗುತ್ತಾರೆ. ಇಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ.

"The Government has been reviewing the seasonal conditions in the State every fortnight."

ಪ್ರತಿ ೧೫ ದಿವಸಕ್ಕೊಮ್ಮೆ ಸರ್ಕಾರ ರಾಜ್ಯದ ಬರ ಪರಿಹಾರ ಕಾವ್ಯಗಾರಿಗಳನ್ನು ವಿಶ್ಲೇಷಣೆ ಮಾಡುತ್ತಿದೆ ಎಂದು ಈ ರೀತಿಯ ಸತ್ಯಕ್ಕೆ ದೂರವಾದ ಹೇಳಿಕೆಗಳನ್ನು ಸದನದಲ್ಲಿ ಕೊಡುವುದನ್ನು ನಿಲ್ಲಿಸಿದರೆ ಏನೂ ಮಾಡದಿದ್ದರೂ ಅಷ್ಟಾದರೂ ಒಳ್ಳೆಯ ಕೆಲಸವಾಯಿತೆಂದು ನಮಗೆ ತೃಪ್ತಿಯಾಗುತ್ತದೆ ಮೊನ್ನೇ ತಾನೇ ಸಚಿವರು ಹೊಸದಾಗಿ ಬಂದಿದ್ದಾರೆ ಅವರು ನೈಜವಾದ ಸ್ಥಿತಿಯನ್ನು ಒಪ್ಪಿಕೊಳ್ಳಲೇಬೇಕು. ನಾನು ಅಧಿಕಾರಕ್ಕೆ ಬಂದು ಬರೀ ಒಂದು ವಾರವಾಗಿದೆ ನನಗೆ ಇನ್ನೂ ರೆವ್ಯೂ ಮಾಡಿಂವುದಕ್ಕೆ ಸಾಧ್ಯವಾಗಿಲ್ಲವೆಂದು ಸರ್ಕಾರ ಎಂದರೆ ಏನು ? ಸರ್ಕಾರ ಅಂದರೆ ಅಧಿಕಾರಿಗಳಿಂದ ರಿವ್ಯೂ ಆದರೆ ಸರ್ಕಾರದ ರಿವ್ಯೂ ಆಗುತ್ತದೆಯೇ ? ಜನತಂತ್ರ ವ್ಯವಸ್ಥೆಯಲ್ಲಿ ಆಳುವುದಕ್ಕೆ ಆದೇಶ

ಪಡೆದ ಜನ ಎಷ್ಟರಮಟ್ಟಿಗೆ ಇದನ್ನು ರಿವ್ಯೂ ಮಾಡಿದ್ದಾರೆ ಎಂಬುದನ್ನು ಮುಖ್ಯವಾಗಿ ನೋಡಬೇಕಾಗುತ್ತದೆ. ಇದುವರೆಗೂ ಹೊಸದಾಗಿ ಬಂದಿರುವ ಖಗೆರ್ಯವರು ಕಂದಾಯ ಮಂತ್ರಿಗಳಾದ ಮೇಲೆ ಒಂದೂ ರಿವ್ಯೂ ಆಗಿಲ್ಲ ಎಂಬುದು ನಿರ್ವಿವಾದ. ಅದನ್ನು ಅವರು ಒಪ್ಪಿಕೊಳ್ಳಬೇಕು.

ಇಲ್ಲಿ ಒಂದು ಕಡೆ ರಾಜ್ಯ ಸರ್ಕಾರ ಮಾಡಬೇಕಾದಂತಹ ರಿವ್ಯೂ ಆಗಿಲ್ಲ. ಮಂತ್ರಿಗಳಿಂ ಮಾಡಬಹುದಾದಂತಹ ರಿವ್ಯೂ ಸಹ ಆಗಿಲ್ಲ. ಇದನ್ನು ನಾವು ಈ ಸದನದಲ್ಲಿ ನಡೆದಿರತಕ್ಕ ಕಲಾಪಗಳನ್ನು ನೋಡಿದರೆ ಗೊತಾಗುತ್ತದೆ. ೯ನೇ ಅಧಿವೇಶನದಲ್ಲಿ ಶ್ರೀಮಾನ್ ಕೆ, ಹೆಚ್. ಹನುಮೇಗೌಡರು ಚುಕ್ಕೆ ಗುರುತಿನ ಪ್ರಶ್ನೆಯನ್ನು ಕಳಿಸಿದ್ದರು. ಪ್ರಶ್ನೆ ಸಂಖ್ಯೆ ೨೦೫ ಅದಕ್ಕೆ ಉತ್ತರ ಸರ್ಕಾರ ನೀಡಿದೆ, ಹಾಸನ ಕ್ಷೇತ್ರದ ಬಹಳಂಭಾಗ ಆಗಾಗ್ಗೆ ಬರಗಾಲಕ್ಕೆ ತುತ್ತು ಆಗುವುದರಿಂದ ಈ ಭಾಗದ ಜನರನ್ನು ಕ್ಷಾಮದ ದವಡೆಯಿಂದ ಬಿಡಂಗಡೆ ಮಾಡಲು ಯಾವ ಶಾಶ್ವತ ಕ್ರಮಗಳನ್ನು ಸರ್ಕಾರ ತೆಗೆದಂಕೊಂಡಿದೆ. ಇದು ಪ್ರಶ್ನೆ. ಇದಕ್ಕೆ ಉತ್ತರವಾಗಿ ರಾಜ್ಯದಲ್ಲಿ ಕ್ಷಾಮ ಇರುವುದಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಏನನ್ನು ರಿವ್ಯೂ ಇವರು ಮಾಡಿದರು. ಕ್ಷಾಮ ಇಲ್ಲ ಎಂಬುದನ್ನು ರಿವ್ಯೂ ಮಾಡಿದರೋ ? ಪ್ರಶ್ನೆಗೆ ಉತ್ತರ ಕೊಡುವವರು ಯಾರು? ಸರ್ಕಾರದಿಂದ ಬಂದಿರತಕ್ಕ ಈ ಹೇಳಿಕೆಗೆ ಹಾಗೂ ಈಗಿನ ಉತ್ತರಗಳಲ್ಲಿ ಏನಾದರೂ ಸಾಮ್ಯ ಇದೆಯೇ ? ಹಾಗೆ ಇಲ್ಲ ಎಂದರೆ ಚರ್ಚೆ ಏತಕ್ಕೆ ಮಾಡಬೇಕು. ಹಾಗೆಯೇ ಮತ್ತೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೪೪ಕ್ಕೆ ಸರ್ಕಾರದ ಉತ್ತರ. ಮಾನ್ಯ ಮಾಲ್ಲಾರಿಗೌಡರು ಕೇಳಿದ್ದ ಪ್ರಶ್ನೆ. "ರಾಜ್ಯದಲ್ಲಿ ಎಷ್ಟು ಜಿಲ್ಲೆಯಲ್ಲಿ ಬರಗಾಲ ಇದೆ". ಉತ್ತರ ೧೫ ಜಿಲ್ಲೆಯಲ್ಲಿ ಬರಗಾಲ ಇದೆ ಎಂದು ಹೇಳಿದ್ದಾರೆ. ಈ ಸದನಕ್ಕೆ ಕೊಟ್ಟಿರುವ ಉತ್ತರ ಇಲ್ಲಿಯವರೆಗೆ ಬರಗಾಲ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಎಂಬ ಬಗ್ಗೆ ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು ಎಂಬ ಪ್ರಶ್ನೆಗೆ ಲಗತ್ತಿಸಲಾಗಿದೆ ಎಂದು ಉತ್ತರ ನೀಡಿದ್ದಾರೆ. ಮಳೆಯ ಅಭಾವದ್ದು ಏನು ? ಈಗ ಇಲ್ಲಿ ಕೊಟ್ಟಿರತಕ್ಕ ಹೇಳಿಕೆಯನ್ನು ಹಾಗೂ ಮಾನ್ಯ ಮಂತ್ರಿಗಳು ನಿನ್ನೆಯ ದಿವಸ ಈ ಮನೆಗೆ ಕೊಟ್ಟಿರತಕ್ಕ ಉತ್ತರವನ್ನು ಗಮನಿಸಿದರೆ, ಈಗ ಒದಗಿಸಿರತಕ್ಕದ್ದು ಬಹಳ ಬಹಳ ಸ್ವಾರಸ್ಯವಾಗಿದೆ.

> "In General, the condition of standing khariff crops is satisfactory under irrigation and where ever adequate rain received. However in dry land parts of Mysore, Mandya, Chitradurga, Hassan, Bellary, parts of Dharwad and Belgaum districts crops continue to suffer due to moisture stress owing to in-adequate train."

ಇಲ್ಲಿ ಯಾವುದು ಸರಿ. ಇಲ್ಲಿ ಏಳು ಜಿಲ್ಲೆಗೆ ಬಂತು. ೧೫ ಜಿಲ್ಲೆಯಿಂದ ೭ಕ್ಕೆ ಬಂತು. ಇದರಲ್ಲಿ ಯಾವುದು ಸರಿ. ಈ ದ್ವಂದ್ವವನ್ನು ನನಗೆ ಮಾನ್ಯ ಮಂತ್ರಿಗಳು ಮೊದಲು ಬಿಡಿಸಬೇಕು. ನಾನು ಮುಖ್ಯವಾಗಿ ಚರ್ಚೆಗೆ ಹೋಗುವುದಕ್ಕೆ ಮುಂಚೆ ನಾನು ಅನೇಕ ಜಿಲ್ಲೆಗಳಿಗೆ ಹೋಗಿ ಬಂದಿದ್ದೇನೆ. ಮೈಸೂರು ಜಿಲ್ಲೆಯ ಬಹುತೇಕ ತಾಲ್ಲೂಕುಗಳಿಗೆ ಹೋಗಿದ್ದೇನೆ. ನನ್ನ ಜೊತೆ ಮಾನ್ಯ ಪಾಟಾಳ್ ನಾಗರಾಜ್‌ರವರೂ ಇದ್ದರು. ಆಲ್ಲಿರತಕ್ಕ ಸ್ಥಳೀಯ ಶಾಸಕರೂ ಬಂದಿದ್ದರು. ಅವರೂ ಕೆಲವು ಮಾಹಿತಿಗಳನ್ನು ಕೊಟ್ಟರು. ನಾನು ಅದನ್ನೆಲ್ಲಾ ಸಂಗ್ರಹಿಸಿ ಇಟ್ಟಿದ್ದೇನೆ. ಈಗ ನಾನು ವಿವರಕ್ಕೆ ಹೋಗುವುದಿಲ್ಲ. ಆದರೆ ಒಟ್ಟಾರೆ ರಾಜ್ಯದಲ್ಲಿರತಕ್ಕ ಸ್ಥಿತಿಯ ನೈಜವಾದ ಚಿತ್ರಣವನ್ನು ಕೊಡತಕ್ಕಂಥ ಸ್ಥಿತಿಯಲ್ಲಿ ಸರ್ಕಾರ ಇಲ್ಲ ಅಂದರೆ ಈ ಸರ್ಕಾರ ಇಲ್ಲವೆಂದು ನಾವು ಹೊರಗಡೆ ಹೇಳಿದರೆ ಇಲ್ಲ, ಸರ್ಕಾರ ಇದೆ ಎಂದು ಅಲ್ಲೊಮ್ಮೆ ಇಲ್ಲೊಮ್ಮೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಡುತ್ತಾರೆ ಅದನ್ನು ನೋಡಿ ಜನ ಸರ್ಕಾರ ಇದೆ ಎಂದು ತಿಳಿದಿದ್ದಾರೆ. ನಾವು ಸರ್ಕಾರ ಇದೆಯೋ ಅಥವಾ ಇಲ್ಲವೋ ಎಂದು ಪರೀಕ್ಷೆ ಮಾಡತಕ್ಕದ್ದು ರಾಜ್ಯದ ಇಂತಹ ಸಮಸ್ಯೆಗಳನ್ನು ಚರ್ಚೆ ಮಾಡತಕ್ಕ ಸಮಯದಲ್ಲಿ. ಸರ್ಕಾರವೇ ಇದ್ದಿದ್ದರೆ ಹೀಗೆ ಹೇಳಿಕೆಗಳು ಪ್ರಶ್ನೆಗೆ ಉತ್ತರದ ರೂಪದಲ್ಲಿ ಈ ಸದನದಲ್ಲಿ ಕೊಟ್ಟಿರತಕ್ಕ ಹೇಳಿಕೆಗಳನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿ ನೋಡಿದರೆ ಇವರು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಹಿಂದೆ ಸಮ್ಮಿ ಸರ್ಕಾರ ರಾಜ್ಯದಲ್ಲಿ ಅಸ್ತಿತ್ವದಲ್ಲಿ ಇದ್ದಾಗ ಬರ ಪರಿಹಾರಕ್ಕೆ ಒಂದು ವಿಶೇಷವಾಗಿ ವ್ಯವಸ್ಥೆಯನ್ನು ಮಾಡಿದ್ದರು. ಸರ್ಕಾರಿ ಅಧಿಕಾರಿಗಳದ್ದು ಒಂದು ವಿಜಿಲೆನ್ಸ್ ಸೆಲ್ ಅನ್ನು ಮಾಡಿದ್ದರು. ಆದನ್ನು ಮತ್ತೆ ಏನಾದರೂ ನೀವು ಕಾನ್ಸ್‌ಸ್ಟಿಟ್ಯೂಟ್ ಮಾಡಿದ್ದಾರೋ ? ಆಲ್ಲಲ್ಲಿ ಮೇವು ಕೇಂದ್ರಗಳನ್ನು ಇಂತಹ ಜಿಲ್ಲೆಗಳಲ್ಲಿ ಸ್ಥಾಪನೆ ಮಾಡಲಾಗಿತ್ತು, ಅದನ್ನು ಏನಾದರೂ ಇವರು ಮಾಡಿದ್ದೀರೋ ?

ಗಂಜಿ ಕೇಂದ್ರಗಳನ್ನು ತೆರೆಯುವ ಸ್ಥಿತಿಗೆ ನಾವು ಹೋಗದೆ ಇರಬಹುದು. ಆದರೆ ಅಂತಹ ಪ್ರಯತ್ನ ಈ ಸರ್ಕಾರದಲ್ಲಿ ಏನಾದರೂ ನಡೆದಿದೆಯೋ ? ಧಾರವಾಡದಲ್ಲಿ ದನಕರುಗಳನ್ನು ಕಟುಕರಿಗೆ ಮಾರತಕ್ಕ ಸ್ಥಿತಿ ಇದೆ ಎಂದು ಹೇಳಿ ಅಲ್ಲಿನ ಸ್ಥಳೀಯ ಶಾಸಕರು ಮತ್ತು ಮುಖಂಡರುಗಳು ನನಗೆ ಬಂದು ಹೇಳಿದ್ದಾರೆ. ಆದ್ದರಿಂದ ಇದನ್ನು ತಡೆಯುಲು ಗೋಶಾಲೆಗಳನ್ನು ತೆರೆಯತಕ್ಕ ಪ್ರಯತ್ನ ಏನಾದರೂ ಆಗಿದೆಯೋ ? ಇದರ ಬಗ್ಗೆ ಯಾವ ವಿವರಣೆಯೂ ಇಲ್ಲ, ಹೇಳಿಕೆ ಬಹಳ ಚೆನ್ನಾಗಿದೆ; ಈ ಹೇಳಿಕೆಯನ್ನು ಎಷ್ಟರಮಟ್ಟಿಗೆ ನಾವು ಗಮನಿಸಬಹುದು; ಇವತ್ತು ಮಾನ್ಯ ವಾಟಾಳ್ ನಾಗರಾಜ್ ರವರು ತಮ್ಮ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ಅಭಾವದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದೂ ಕೂಡ ಇದಕ್ಕೆ ಸೇರಿಕೊಂಡಿರತಕ್ಕದ್ದು ; ಚಾಮರಾಜನಗರಕ್ಕೆ ವಿದ್ಯುಚ್ಛಕ್ತಿ ಸರಿಯಾಗಿ ಹೋಗುತ್ತಿಲ್ಲ. ಶೆ ಹೆಚ್.ಪಿ. ಪಂಪುಗಳು ಸರಿಯಾಗಿ ಓಡುತ್ತಿಲ್ಲ ಬೀದಿ ದೀಪಗಳು ಉರಿಯುತ್ತಿಲ್ಲ. ಮನೆ ದೀಪಗಳು ಸಹ ಉರಿಯುತ್ತಿಲ್ಲ ಎಂದು ಹೇಳುತ್ತಾರೆ ಇದರ ಬಗ್ಗೆ ಸರ್ಕಾರಕ್ಕೆ ಬರೆದಿದ್ದು ಆಯಿತು; ಹೇಳಿದ್ದು ಆಯಿತು ಈ ದೃಷ್ಟಿಯಿಂದ ವಿದ್ಯುಚ್ಛಕ್ತಿ ಅಭಾವದ ಬಗ್ಗೆ ಪ್ರಸ್ತಾಪ ಮಾಡಿದರೆ, ರೈತರಿಗೆ ಏನು ವ್ಯವಸ್ಥೆ ಮಾಡಿದೆ ಎಂಬ ಬಗ್ಗೆ ಮಾಹಿತಿ ಕೊಟ್ಟಿಲ್ಲ. ನಾನು ಇವೆಲ್ಲವನ್ನು ಸ್ವಲ್ಪ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಮುಂಚೆ ಒಂದೆರಡು ಬಹಳ ಮುಖ್ಯವಾದ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಬೇಕು. ಒಂದು ಕಡೆ ಸರ್ಕಾರ ಇಲ್ಲ. ಮತ್ತೊಂದು ಕಡೆ ಕಂದಾಯ ಮಂತ್ರಿಗಳು ಆಗಾಗ ಬದಲಾವಣೆ ಆಗುತ್ತಿರುವುದರಿಂದ ಅವರ ಹತ್ತಿರ ಸರಿಯಾದ ಮಾಹಿತಿ ಇಲ್ಲ. ಈಗ ಸರ್ಕಾರದ ಅಧಿಕಾರಿಗಳು ಕೊಟ್ಟಂತಹ ಮಾಹಿತಿಯನ್ನು ಆನುಸರಿಸಿ ನಾವು ಇಲ್ಲಿ ಚರ್ಚೆಯನ್ನು ಪ್ರಾರಂಭ ಮಾಡಿದೆವೆ. ಅವರೇನಾದರೂ ಪರೀಕ್ಷೆ ಮಾಡಿದ್ದಾರೆಂಬ ಬಗ್ಗೆ ಯಾವುದೇ ಸಾಕ್ಷಿ ಆಧಾರಗಳೂ ಸಹ ಇಲ್ಲ. ಆಡಳಿತದಲ್ಲಿ ಇರತಕ್ಕ ಬಹುಮುಖ್ಯವಾದ ಮತ್ತೊಂದು ದೋಷವೇನೆಂದರೆ ಜಿಲ್ಲಾಪರಿಷತ್ತುಗಳು ಈ ಒಂದು ಶಾಸನ ಸಭೆ ಸರ್ಕಾರಕ್ಕೆ ಇದ್ದಂತಹ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಶಾಸನದ ಮೂಲಕ ಜಿಲ್ಲಾಪರಿಷತ್ತಿಗೆ ಅಧಿಕಾರವನ್ನು ವಹಿಸಿಕೊಟ್ಟಿದೆ. ಮಳೆ ಹೆಚ್ಚಾಗಿ ಬಿದ್ದಿರುವ ಬೀದರ್ ಅಥವಾ ಗುಲ್ಬರ್ಗಾ ಪ್ರದೇಶಗಳಿಗೆ ನಾವು ಹೋದರೆ ಹಣವನ್ನು ಜಿಲ್ಲಾಪರಿಷತ್ತಿಗೆ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಇದನ್ನು ಆಪರೇಟ್ ಮಾಡತಕ್ಕಂತಹ ಏಜೆನ್ಸಿ ಡೆಪ್ಯೂಟಿ ಕಮಿಷನರವರು ಅವರು ಜಿಲ್ಲಾಪರಿಷತ್‌ಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಈ ಹಣವನ್ನು ಖರ್ಚು ಮಾಡತಕ್ಕ ವ್ಯವಸ್ಥೆ ಇರುವುದು ಜಿಲ್ಲಾ ಪರಿಷತ್ತಿನವರ ಕೈಯಲ್ಲಿ. ಆದ್ದರಿಂದ ಜಿಲ್ಲಾಪರಿಷತ್ತಿನ ಇಂಜಿನಿಯರ್‌ಗಳು ಈ ಕೆಲಸವನ್ನು ಮಾಡಬೇಕು. ಆಡಳಿತಾತ್ಮಕವಾಗಿ ಇದನ್ನು ಅನುಷ್ಠಾನಕ್ಕೆ ತರುವ ವ್ಯವಸ್ಥೆ ಜಿಲ್ಲಾ ಪರಿಷತ್ತಿನವರ ಕೈಯಲ್ಲಿದೆ. ಆದರೆ ಸರ್ಕಾರದವರು ಜಿಲ್ಲಾಪರಿಷತ್ತಿನವರ ಜೊತೆಯಲ್ಲಿ ಯಾವುದೇ ಸಂಪರ್ಕವನ್ನು ಇಟ್ಟುಕೊಂಡಿಲ್ಲ. ಏಕೆಂದರೆ ಹಣ ಖರ್ಚು ಮಾಡುವವರು ಯಾರೆಂದರೆ ಜಿಲ್ಲಾಧಿಕಾರಿಯವರು. ಜಿಲ್ಲಾಪರಿಷತ್ತು ಪಂತ್ತು ಮಂಡಲ ವ್ಯಾಪ್ತಿಯಲ್ಲಿ ಆಗತಕ್ಕ ಪ್ರತಿಯೊಂದು ಕೆಲಸಕ್ಕೂ ಚುನಾಯಿತ ಸಭೆ ಇರತಕ್ಕಂಥ ಜಿಲ್ಲಾಪರಿಷತ್ ಜಲ್ಲಾಧಿಕಾರಿಯವರ ಹತ್ತಿರ ಹೋಗಬೇಕು ಈ ಒಂದು ಆಡಳಿತದ ದ್ವಂದ್ವದಿಂದಾಗಿ ಬಹುತೇಕ ಈ ಹಣ ಎಲ್ಲಿ ಖರ್ಚಾಗಿದೆ ಯಾವ್ಯಾವ ಬಾಬಿಗೆ ಖರ್ಚಾಗಿದೆ ಎಂಬ ಬಗ್ಗೆ ನಮಗೆ ಲೆಕ್ಕ ಸಿಕ್ಕಿಲ್ಲ. ಆದ್ದರಿಂದ ಇಂತಹ ಒಂದು ಜನರ ಸಮಸ್ಯೆ ಬಂದಾಗ ಪ್ರತಿಯೊಂದು ಭಾಗದಿಂದ ಆಯ್ಕೆಯಾಗಿ ಬಂದಿರತಕ್ಕ ಸದಸ್ಯರು ಅಂದರೆ ಪ್ರತಿಯೊಂದು ಮಂಡಲದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರತಿಯೊಂದು ಜಿಲ್ಲೆಯಲ್ಲೂ ಇರುತ್ತಾರೆ. ಅವರ ಹತ್ತಿರ ಪೂರ್ಣ ಮಾಹಿತಿ ಇರುತ್ತದೆ. ಸರ್ಕಾರ ಬಿಡುಗಡೆಮಾಡಿರತಕ್ಕ ಹಣವನ್ನು ಖರ್ಚು ಮಾಡುವಾಗ ಜಿಲ್ಲಾ ಪರಿಷತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಇದ್ದರೆ, ಸ್ಥಳೀಯವಾದಂತಹ ಸಮಸ್ಯೆಗೆ ಯಾರು ಕಾರಣರು? ಶಾಸಕರನ್ನು ನೀವು ಕೇಳುವುದಿಲ್ಲ, ಜಿಲ್ಲಾ ಪರಿಷತ್ತಿನ ಸದಸ್ಯರನ್ನೂ ಕೇಳುವುದಿಲ್ಲ. ಹಾಗಿದ್ದರೆ ಸರ್ಕಾರ ಅಂದರೆ ಏನು? ಸ್ವರ್ಗದಿಂದ ಭೂಮಿಗೆ ಇಳಿದು ಬಂತಹ ಈ ಸರ್ಕಾರ ಏನು ಬೇಕಾದರೂ ಮಾಡಬಹುದು. ಇಂಥ ಒಂದು ಪರಿಸ್ಥಿತಿಯನ್ನು ದಯವಿಟ್ಟು ನಿರ್ಮಾಣ ಮಾಡಬೇಡಿ. ಇಲ್ಲಿ ನಿಮ್ಮ ಪ್ರತಿಷ್ಠೆಯ ಪ್ರಶ್ನೆಯಿಲ್ಲ. ನಮ್ಮ ಪ್ರತಿಷ್ಠೆ ಪ್ರಶ್ನೆ ಇಲ್ಲ; ಪ್ರಶ್ನೆಯಿರುವುದು ರೈತರಿಗೆ ಇರತಕ್ಕಂಥ ಸಮಸ್ಯೆಗೆ ಬೇಕಾದಂತಹ ಪರಿಹಾರವನ್ನು ಕಂಡುಹಿಡಿಯುವುದು. ಆ ಸಮಸ್ಯೆಯ ಪರಿಹಾರಕ್ಕೆ ಈಗಿರತಕ್ಕಂಥ ವ್ಯವಸ್ಥೆಯೇನು? ನಿಮಗೆ ಆ ವ್ಯವಸ್ಥೆಯ ಬಗ್ಗೆ ವಿಶ್ವಾಸ ಇಲ್ಲದಿದ್ದರೆ, ಅದನ್ನು ಬೇರೆ ರೀತಿ ಚರ್ಚೆ ಮಾಡೋಣ. ಆದರೆ ಬರ ಪರಿಹಾರ ಕಾಮಗಾರಿಗಳಿಗೆ ಅಥವಾ ವಿಪರೀತ ಮಳೆ ಬಂದಿರತಕ್ಕಂಥ ಕಡೆ ಅಲ್ಲಿ ತೆಗೆದುಕೊಳ್ಳಬೇಕಾದಂಥ ಕಾಮಗಾರಿಗಳಿಗೆ ಸರ್ಕಾರ ತನ್ನ ಮೂಗು ತೂರಿಸುವುದುಬೇಡ. ಈ ಕೆಲಸವನ್ನು ಸ್ಥಳೀಯ ಸಂಸ್ಥೆಗಳಿಗೆ ಬಿಟ್ಟುಬಿಡುವುದು ಒಳ್ಳೆಯದು, ಇದರ ಬಗ್ಗೆ ಬಹಳ ಮುಖ್ಯವಾದ ಒಂದು ನಿರ್ಣಯವನ್ನು ನಮ್ಮ ಶ್ರೀ ವಿ. ಪಿ. ಸಿಂಗ್‌ರ ಸರ್ಕಾರ ತೆಗೆದುಕೊಂಡಿತ್ತು. ಇದು ಬರ ಪರಿಹಾರವೇ ಆಗಿರಲಿ, ಅತಿವೃಷ್ಟಿ ಅನಾವೃಷ್ಟಿಯೇ ಆಗಿರಲಿ ಈ ಮೊದಲು ಆ ಪರಿಹಾರಕ್ಕಾಗಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಹೋಗಿ ಇಲ್ಲಿ ಮಾಡಿದಂಥ ಖರ್ಚಿನ

ಲೆಕ್ಕವನ್ನು ಅವರಿಗೆ ಒಪ್ಪಿಸಿದಾಗ, ಕೇಂದ್ರ ಸರ್ಕಾರದ ಅಧಿಕಾರಿಗಳ ಒಂದು ತಂಡ ರಾಜ್ಯದಲ್ಲಿ ಯಾವ ಯಾವ ಪ್ರದೇಶದಲ್ಲಿ ಬರ, ಅತಿವೃಷ್ಟಿ, ಅನಾವೃಷ್ಟಿ ಇದೆಯೋ ಅಂಥ ಪ್ರದೇಶಗಳಿಗೆ ಭೇಟಿ ನೀಡಿ, ಸಮೀಕ್ಷೆ ನಡೆಸಿ, ಇದರ ಬಗ್ಗೆ ಒಂದು ಕೂಲಂಕುಷವಾದ ವರದಿಯನ್ನು ಅವರು ಕೇಂದ್ರ ಸರ್ಕಾರಕ್ಕೆ, ಕೊಟ್ಟಮೇಲೆ ಆ ವರದಿಯ ಆಧಾರದ ಮೇಲೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಹಣ ಬಿಡುಗಡೆ ಮಾಡುವಂಥ ಒಂದು ವ್ಯವಸ್ಥೆ ಇತ್ತು. ಅದೂ ಕೂಡ ಪ್ಲಾನ್ ಅಸಿಸ್ಟೆನ್ಸ್ ಎಂದು ಅಡ್ವಾನ್ಸ್ ಆಗಿ ಕೊಡುತ್ತಿದ್ದರು. ಅಪ್ರೂವ್ ಆಗಿರತಕ್ಕಂಥ ಯೋಜನೆಗೆ ಸ್ವಲ್ಪ ಹಣವನ್ನು ಮುಂಗಡವಾಗಿ ಕೊಡುತ್ತಿದ್ದರು ಇದರಿಂದಾಗಿ ರಾಜ್ಯ ಸರ್ಕಾರ ತಾನು ಖರ್ಚು ಮಾಡಬಾರದಂಥ ಸ್ಥಿತಿಯಲ್ಲಿ ದೈನ್ಯವಾಗಿ ಕೇಂದ್ರದಲ್ಲಿ ಬೇಡಿಕೊಳ್ಳುವಂಥ ಒಂದು ವ್ಯವಸ್ಥೆ ಇತ್ತು. ನಂತರ ನಮ್ಮ ಸರ್ಕಾರ ಇದನ್ನು ಬದಲಾವಣೆ ಮಾಡಿ ಒಂದು ನಿಧಿಯನ್ನು ಪ್ರಾರಂಭ ಮಾಡಿದರು. ಆಯಾಯ ರಾಜ್ಯಗಳಲ್ಲಿ ೪-೫ ವರ್ಷಗಳಲ್ಲಿ ಆಗಿರತಕ್ಕಂಥ ದಾಮಾಷ ಲೆಕ್ಕ ಮಾಡಿ, ಒಂದು ರಾಜ್ಯಕ್ಕೆ ಇಷ್ಟು ಹಣವೆಂದು ಅವರು ಖರ್ಚು ಮಾಡಲಿ, ಮಾಡದೇ ಇರಲಿ, ಒದಗಿಸುವ ಒಂದು ಶಾಶ್ವತವಾದ ವ್ಯವಸ್ಥೆಯನ್ನು ಮಾಡಿದರು.

(ಗೊಂದಲ)

SRI D.B. CHANDRE GOWDA. — These side talks wtihin this House should be stopped.

ಶ್ರೀ ಕೆ. ಲಕ್ಕಪ್ಪ.—ಅವರ ಭಾಷಣ ಕೇಳಿದ್ದೇನೆ. ಅವರು ಹೇಳಿದ್ದನ್ನು ನಾನು ಹೇಳಲೆ?

ಶ್ರೀ ಶಿವಾನಂದ ಹೆಜ್. ಕೌಜಲಗಿ.—ನೀವು ಮಾತನಾಡಬೇಕಾದರೆ ಮಧ್ಯದಲ್ಲಿ ನಾವು ಮಾತ ನಾಡುವುದಿಲ್ಲ. ನೀವು ಸೀನಿಯರ್ ಪಾರ್ಲಿಮೆಂಟ್ ಮೆಂಬರ್ ಆಗಿದ್ದವರು. ನೀವು ಹೀಗೆ ಹೆ ಳಿದರೆ ನಮ್ಮಲ್ಲಿ ಹುಡುಗರು ಹೇಗೆ ಕಲಿಯುವುದು ?

(ಗೊಂದಲ)

ಛೇರ್ಮನ್.—ಎಲ್ಲರೂ ಸಭೆಯಂ ಒಂದು ಘನತೆಯನ್ನು ಕಾಪಾಡಿಕೊಳ್ಳಬೇಕು. ಈ ಮಾತನ್ನು ನಾನಂ ಎಲ್ಲರಿಗೂ ಹೇಳುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ವಿರೋಧ ಪಕ್ಷದ ನಾಯಕರು ಮಾತನಾಡಬೇಕಾದರೆ ಅವರ ಪಕ್ಷದ ಸದಸ್ಯರೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್.— ಬರಗಾಲದ ಬಗ್ಗೆ ಚರ್ಚೆ ನಡೆಯುತ್ತಿರುವಾಗ, ವಿಷಯದ ಗಂಭೀರತೆಯೇ ಇಲ್ಲ. ಎಷ್ಟು ಕುರ್ಚಿಗಳು ಖಾಲಿಯಿವೆ ನೋಡಿ? ೧೮೦ ಜನ ಸದಸ್ಯರಲ್ಲಿ ೨೫ ಜನ ಇದ್ದಾರೆ. ತಾವೇ ಬೇಕಾದರೆ ನೋಡಿ.

ಶ್ರೀ ಬಿ. ಹೆಜ್. ಬನ್ನಿಕೋಡ್.—ಇಲ್ಲಿ ಹಾಜರಾತಿ ಇದ್ದರೂ ಸಹ ಏನೂ ಪ್ರಯೋಜನ ಇಲ್ಲವೆಂದು ಹೊರಗಡೆ ಹೋಗಿದ್ದಾರೆ.

ಶ್ರೀ ಡಿ. ಬಿ. ಚಂದ್ರೆಗೌಡ .—ಮಾನ್ಯ ಅಧ್ಯಕ್ಷಣಿಯಂವರೆ, ನಾನು ಅವರು ಮಾತನಾಡುವುದಕ್ಕೆ ಚರ್ಚೆ ಮಾಡುವುದಕ್ಕೆ ಅಡಿ ಪಡಿಸಲಿಕ್ಕೆ ನಾನು ಹೋಗಲಿಲ್ಲ. ಅವರ ಮಾತಿನಿಂದ ನನಗೆ ತೊಂದರೆ ಯಾಗಿತ್ತು. ಶಾಸನ ಸಭೆಯಲ್ಲಿ ಕುಳಿತುಕೊಂಡು ಇಷ್ಟೊಂದು ಜೋರಾಗಿ ಮಾತನಾಡುತ್ತಾ ಇದ್ದರೆ ಹೇಗೆ ?

ಶ್ರೀ ಕೆ. ಲಕ್ಕಪ್ಪ .—ನೀವು ಮಾತನಾಡುವುದನ್ನು ಅಪ್ರಿಷಿಯೇಟ್ ಮಾಡುತ್ತಿದ್ದೆವು.

ಶ್ರೀ ಡಿ. ಬಿ. ಚಂದ್ರೇಗೌಡ .—ಅದನ್ನು ಗೌಪ್ಯವಾಗಿ ಏತಕ್ಕೆ ಮಾಡುತ್ತೀರಿ ಎದ್ದುನಿಂತು ಬಹಿರಂಗವಾಗಿ ಮಾಡಿ ; ನಾನು ಕುಳಿತುಕೊಳ್ಳುತ್ತೇನೆ.

ಛೇರ್ಮನ್ .—ವಾಟಾಳ್ ನಾಗರಾಜ್‌ರವರಿಗೆ ನೋಡಿ, ಇಲ್ಲಿ ಎಲ್ಲರಿಗೂ ಹೇಳಿಬಿಟ್ಟು ಈಗ ಅವರೇ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ .—ಅಧ್ಯಕ್ಷರೆ, ಅವರು ನನಗೆ ಏನು ಹೇಳುತ್ತಿದ್ದರು ಅಂದರೆ, ನಮ್ಮ ಸದಸ್ಯರಂ ಏತಕ್ಕೆ ಇಲ್ಲಿಗೆ ಬರಲಿಲ್ಲ ಎನ್ನುವುದನ್ನು ಹೇಳಲಿಕ್ಕೆ ಅವರು ಇಲ್ಲಿಗೆ ಎದ್ದುಬಂದು ಹೇಳುತ್ತಿದ್ದಾರೆ. ನಾನು ಅವರ ಕುರ್ಚಿ ಹತ್ತಿರ ಹೋಗಿಲ್ಲ. ನನ್ನ ಹತ್ತಿರಕ್ಕೆ ಅವರು ಎದ್ದುಬಂದು ಹೇಳುತ್ತಿದ್ದಾರೆ. ದಯವಿಟ್ಟು ಕ್ಷಮಿಸಿ, ನಮ್ಮ ಸದಸ್ಯರು ಅರ್ಜಿಗಳನ್ನು ತೆಗೆದುಕೊಂಡು ಮಂತ್ರಿಗಳ ಹತ್ತಿರ ಹೋಗಿದ್ದಾರೆಂದು ಗುಟ್ಟಾಗಿ ಹೇಳಲಿಕ್ಕೆ ಅವರು ನನ್ನ ಹತ್ತಿರ ಬಂದಿದ್ದಾರೆ.

ಥೇರ್ಮನ್ .—ಅವರು ಬಂದು ಹೇಳಿದರೂ ಅವರ ಕಡೆ ತಾವು ಗಮನ ಕೊಡಬಾರದಾಗಿತ್ತು.

ಶ್ರೀ ವಾಟಾಳ್ ನಾಗರಾಜ್ .—ಅಧ್ಯಕ್ಷರೆ, ನಾನು ಅವರಿಗೆ ಮಾತನಾಡಬೇಡಿ ಹೋಗಿ, ಹೋಗಿ ಎಂದು ಹೇಳುತ್ತಿದ್ದೇನೆ. ಆದರೂ ಅವರು ನಮ್ಮ ಜಿಲ್ಲೆಯವರು, ಅದಕ್ಕಾಗಿ ಅವರು ಬಂದು ಬಹಳ ತೊಂದರೆ ಕೊಡುತ್ತಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ .—ಮಾನ್ಯ ವಾಟಾಳ್‌ರವರೇ ಹೇಳುವುದೊಂದು ಮಾಡುವುದೊಂದು ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್ .—ಅಧ್ಯಕ್ಷರೆ, ಅದು ಶಿವರಾಮೇಗೌಡರ ಜಾತಕ. ಹೇಳುವುದೊಂದು, ಮಾಡುವುದೊಂದು ನನ್ನ ಜಾತಕ ಅಲ್ಲ ;—

ಶ್ರೀ ಡಿ. ಬಿ. ಚಂದ್ರೇಗೌಡ .—ಅಧ್ಯಕ್ಷರೆ, ಇಂತಹ ಗಂಭೀರ ವಿಚಾರವನ್ನು ನಾವು ಚರ್ಚೆ ಮಾಡುವಾಗ ಕನಿಷ್ಟ ಗಾಂಭೀರ್ಯವನ್ನಾದರೂ ಉಳಿಸಿಕೊಳ್ಳುವುದು ಒಳ್ಳೆಯದು ಎಂದು ನನ್ನ ಸಲಹೆ ಉಳಿದುದನ್ನು ಅವರಿಗೆ ಬಿಟ್ಟು ಬಿಡೋಣ. ಬಹಳ ಮುಖ್ಯವಾದ ವಿಷಯ ಅಂದರೆ ಕೇಂದ್ರ ಮತ್ತು ರಾಜ್ಯಗಳ ಸಂಬಂಧದ ವಿಷಯದಲ್ಲಿ ಎಷ್ಟು ದೂರದ ಬದಲಾವಣೆ ಆಯಿತು ಎಂದು ಹೇಳುತ್ತಿದ್ದೆ. ಈಗ ಹಿಂದಿನ ಕೇಂದ್ರದ ಸರಕಾರ ಇದಕ್ಕಾಗಿ ಒಂದು ಶಾಶ್ವತ ವ್ಯವಸ್ಥೆಯನ್ನು ಮಾಡಿತ್ತು. ಈ ಶಾಶ್ವತ ವ್ಯವಸ್ಥೆ ಅಂದರೆ ರಾಜ್ಯಸರಕಾರ ತನ್ನ ಭಾಗದ ಶೇಕಡಾ ೨೫ನ್ನು ಕೇಂದ್ರ ಸರಕಾರ ಶೇಕಡಾ ೭೫ ಭಾಗವನ್ನು ಸೇರಿಸಿ ಖರ್ಚು ಮಾಡತಕ್ಕಂಥ ಒಂದು ವ್ಯವಸ್ಥೆ. ಕೇಂದ್ರಸರಕಾರ ಈಗಾಗಲೇ ಸುಮಾರು ೨೭ ಕೋಟಿ ರೂಪಾಯಿಯಷ್ಟು ಹಣವನ್ನು ನಮ್ಮ ರಾಜ್ಯ ಸರ್ಕಾರಕ್ಕೆ ಒದಗಿಸಿದೆ. ಅರ್ಥಾತ್ ಶೇಕಡಾ ೨೫ ಭಾಗವನ್ನು ಕರ್ನಾಟಕ ರಾಜ್ಯವು, ಉಳಿದ ೭೫ ಭಾಗವನ್ನು ಕೇಂದ್ರಸರಕಾರವು ಪಡೆಸಿಕೊಂಡು ಒಟ್ಟು ೨೭ ಕೋಟಿ ರೂಪಾಯಿ ಮೊತ್ತವನ್ನು ಖರ್ಚುಮಾಡಲಿಕ್ಕೆ ಅವಕಾಶ ಇದೆ. ಇವೊತ್ತು ಕೇಂದ್ರ ಸರಕಾರವನ್ನು ಕೇಳಿಕೊಂಡು ಹೋಗಬೇಕಾದ ಸ್ಥಿತಿ ಇಲ್ಲ. ಇಂತಹ ಒಂದು ವ್ಯವಸ್ಥೆಯನ್ನು ಮಾಡಿದ ಹಿಂದಿನ ಕೇಂದ್ರಸರಕಾರ ಎಲ್ಲರ ಅಭಿನಂದನೆಗೆ ಪಾತ್ರವಾಗಿದೆ. ಸಹಜವಾಗಿ ಇಷ್ಟು ಹಣ ಇದ್ದರೂ ಕೂಡ ನೀವು ಖರ್ಚು ಮಾಡಲಿಕ್ಕೆ ಏತಕ್ಕೆ ವಿಳಂಬಮೇಷ ಎಣಿಸುತ್ತಿದ್ದೀರಿ. ನಿಮ್ಮಲ್ಲಿರತಕ್ಕ ತೊಂದರೆ ಏನು, ದೋಷ ಏನು ? ಹಣ ಇಲ್ಲ ಎಂದು ಹೇಳುವಂತಾದ್ದು ಬೇರೆ ಬಾಬತ್ತು. ಆದರೆ ಇಲ್ಲಿ ಕೇಂದ್ರಸರಕಾರದಿಂದ ಬರುವಂಥ ೧೯ ಕೋಟಿ ಹಣಕ್ಕೆ ಕೆಲವು ಭಾಗ ನೀವು ಸೇರಿಸಿದರೆ ಅದು ೨೭ ಕೋಟಿ ಆಗುತ್ತದೆ. ಶಾಸನ ಸಭೆಗೆ ರಾಜ್ಯದಲ್ಲಿ ಸ್ಥಾನ ಇಲ್ಲ ಎಂದು ಹೇಳಿ, ಹೇಳಿಕೆ ಕೊಟ್ಟುಬಿಟ್ಟರೆ ಈ ಹಣವನ್ನು ಖರ್ಚು ಮಾಡಲಿಕ್ಕೆ ನಿಮಗೆ ಅವಕಾಶ ಎಲ್ಲಿ ಆಗುತ್ತದೆ. ಅದಕ್ಕೆ ನಾನು ಹೇಳಿದ್ದು ಈ ರಾಜ್ಯದಲ್ಲಿ ಕ್ಷಾಮ ಇಲ್ಲ ಎನ್ನತಕ್ಕ ಉತ್ತರವನ್ನು ಏನು ಈ ಸದನದಲ್ಲಿ ಕೊಟ್ಟಿದ್ದೀರಿ, ಆ ಕಾರಣಕ್ಕೆ ನಾನು ನಿಮ್ಮ ಗಮನಕ್ಕೆ ಇದನ್ನು ತಂದೆ. ಆದ್ದರಿಂದ ಹಣದ ತೊಂದರೆ ಇಲ್ಲ ಎನ್ನತಕ್ಕಂತಾದ್ದು ನಮಗೆ ಸಾರ್ವತ್ರಿಕವಾಗಿ ತಿಳಿದಿರತಕ್ಕಂತಾದ್ದು. ಖರ್ಚುಮಾಡತಕ್ಕ ವ್ಯವಸ್ಥೆಯಲ್ಲಿರುವಂಥ ದೋಷ ಸರಿಪಡಿಸಿ, ಇದು ಬಹಳ ಮುಖ್ಯವಾಗಿ ಮಾಡಬೇಕಾಗಿರತಕ್ಕ ಅಂಶ. ಮಾನ್ಯ ಅಧ್ಯಕ್ಷಣಿಯಂವರೆ, ಈಗ ಪ್ರಸ್ತುತ ಬರಪರಿಹಾರ ಕಾಮಗಾರಿಗಳಿಗೆ ಬರುವುದಕ್ಕೆ ಪಟಂಚೆ ಇದನ್ನು ಗುರುತಿಸುವ ಕ್ರಮ ಹೇಗೆ ? ಬರ ಎಲ್ಲೆಲ್ಲಿದೆ ಎಂದು ಗುರುತಿಸತಕ್ಕದ್ದು: ತಾಲ್ಲೂಕನ್ನೋ ಜಿಲ್ಲೆಯನ್ನೊ ಅಭಾವಪೀಡಿತ ಪ್ರದೇಶ ಎಂದು ಕರೆಯುವುದಕ್ಕೆ ಪುಂಚೆ ಕೆಲವು ನಿಯಮಗಳು ಇವೆ. ಆ ನಿಯಮಗಳಲ್ಲಿ ಸರಕಾರ ನೆನ್ನೆ ಪುನಃ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಆ ಕೆಲವು ನಿಯಮಗಳನ್ನು ಬಹಿರಂಗಪಡಿಸಿದೆ. ಆ ನಿಯಮಗಳು ಎಲ್ಲಿಯೋ ಬ್ರಿಟೀಷ್ ಸಾಮ್ರಾಜ್ಯದಲ್ಲಿ ಮಾಡಿದಂಥ ನಿಯಮಗಳಂತಿವೆ ಒಂದು ಮಳೆ, ಎರಡನೆಯದು ಆಣೆವಾರಿ, ಮೂರನೆಯದು ಕುಡಿಯುವ ನೀರಿಗೆ ಇರತಕ್ಕಂಥ ಅಥವಾ ಕುಡಿಯುವ ನೀರಿಗೆ ಆಗಿರತಕ್ಕಂಥ ತೊಂದರೆ ; ನಾಲ್ಕನೆಯದು ದನಕರುಗಳಿಗೆ ಮೇವು ಸಿಕ್ಕುತ್ತದೆಯೋ ಇಲ್ಲವೋ ಎಂಬುದು ಐದನೆಯದು ಅಲ್ಲಿ ಕೆಲಸಮಾಡತಕ್ಕಂಥ ವ್ಯವಸಾಯವನ್ನು ನಂಬಿಕೊಂಡಿರತಕ್ಕ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸತಕ್ಕಂತಾದ್ದು. ಈ ಐದು ಕಾಮಗಾರಿಗಳನ್ನು ಆಳೆಯತಕ್ಕಂಥ ಮಾನದಂಡವಾಗಿ ಇಟ್ಟುಕೊಂಡಿದ್ದೇವೆ.

೧೨.೦೦ ಪಿ.ಎಂ.

ಆದರೆ, ತಮ್ಮ ಹೇಳಿಕೆಯಲ್ಲಿ ಒಂದೊಂದು ತಿಂಗಳಿಗೂ ಮಳೆ ವ್ಯತ್ಯಾಸವಾಗಿರುವುದನ್ನು ನೋಡುತ್ತಿದ್ದೇವೆ. ಬಿತ್ತನೆ ಆದಮೇಲೆ ಮಳೆ ಬಂದಿಲ್ಲ ಅಥವಾ ಕೆಲವು ಕಡೆ ಹೆಚ್ಚಾಗಿ ಮಳೆ ಬಂದು ಬೆಳೆ ಕೊಳೆತು ಹೋಗಿರತಕ್ಕದ್ದು ಇದೆ. ಆದರೆ ಈ ಲೆಕ್ಕವನ್ನು ಕೊಡತಕ್ಕವರು ನಿಮ್ಮ ಹಳೆಯ ರೆವಿನ್ಯೂ ಅಧಿಕಾರಿಗಳು ಕೊಡತಕ್ಕ ಮಾಹಿತಿಯಮೇಲೆ ಈ ಆಣೆವಾರಿ ನಿಂತಿದೆ. ಆಣೆವಾರಿಯನ್ನು ಬರೆಯತಕ್ಕದ್ದು ಕೇವಲ ಬರಕ್ಕೆ ಮಾತ್ರ ಸೀಮಿತವಾಗಿಲ್ಲ. ಈ ಆಣೆವಾರಿಯ ಸಮಸ್ಯೆ ಎಲ್ಲಿಗೆ ಬಂದಿದೆ ಎಂದರೆ, ಈ

ಹಿಂದಿನ ಕೇಂದ್ರ ಸರಕಾರದವರು ಸಾಲ ಮನ್ನಾ ಮಾಡತಕ್ಕಂಥದು ಕಾರ್ಯಕ್ರಮ ವಿನು ಹಾಕಿ ಕೊಂಡಿತು, ಆ ಕೇಂದ್ರ ಸರ್ಕಾರದಲ್ಲಿ ಸಾಲ ಮನ್ನಾ ಆಗಬೇಕಾದಂಥ ರೈತನಿಗೆ ೩ ವರ್ಷಗಳ ಅವಧಿಗೆ ಅಣಿವಾರಿ ಶೇಕಡ ೩೫ಕ್ಕಿಂತ ಕಡಿಮೆ ಇರಬೇಕು ಎಂದು ನಿರ್ಣಯ ಮಾಡಿತು. ಈ ಅಣಿವಾರಿಯನ್ನು ಯಾವರೀತಿ ಬರೆಯುತ್ತಾರೆಂಬುದು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತಿದೆ. ಹಿಂದೆ ಅಣಿವಾರಿಯನ್ನು ಬರೆಯುವುದಕ್ಕೆ ಹಿಂದೆ ಪಟೇಲರು, ಶ್ಯಾನುಭೋಗರು ಇರುತ್ತಿದ್ದರು. ಆದರೆ ಈಗ ನಾವು ಬ್ರಹ್ಮ ಸೃಷ್ಟಿಮಾಡಿ ವಿಲೇಜ್ ಅಕೌಂಟೆಂಟ್‌ಗಳನ್ನು ಇಟ್ಟಿದ್ದೇವೆ. ಈ ವಿಲೇಜ್ ಅಕೌಂಟೆಂಟ್‌ಗಳು ಎಲ್ಲಿರುತ್ತಾರೋ, ಯಾವ ರೀತಿ ಇರುತಾರೋ, ಹೇಗೆ ಅಣಿವಾರಿಯನ್ನು ಬರೆಯುತ್ತಾರೋ ನಮಗೆ ಗೊತ್ತಿಲ್ಲ. ಅಷ್ಟೇ ಅಲ್ಲ ಇವರು ಯಾರ ಹತೋಟಿಯಲ್ಲಿರುತ್ತಾರೆ ಎಂಬುದೂ ಕೂಡ ನಮಗೆ ಗೊತ್ತಿಲ್ಲ. ಆಧುನಿಕ ಪದ್ಧತಿಯಲ್ಲಿ ನಾವು ಒಂದು ಪ್ರದೇಶವನ್ನು ಈ ಒಂದು ಬರಪರಿಹಾರ ಕಾಮಗಾರಿ ವ್ಯಾಪ್ತಿಗೆ ತರಬೇಕಾದರೆ ಮೊದಲು ನಾವು ಹೊಸ ಕ್ರಮಗಳನ್ನು ಅನುಸರಿಸುವಂಥ ಪ್ರಯತ್ನ ಮಾಡಬೇಕು. ಆಂದರೆ ಕುಡಿಯುವ ನೀರಿಗೆ ಬರ ಇಲ್ಲದಿರಬಹುದು, ದನಕರುಗಳ ಮೇವಿಗೂ ತೊಂದರೆ ಆಗದಿರಬಹುದು ; ಆದರೆ ಒಂದು ರೂಪಾಯಿನ ಬೆಳೆ ಬಾರದೇ ಇರತಕ್ಕ ಸಂದರ್ಭವೂ ಇದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನು ತಮ್ಮ ಗುಲ್ಬರ್ಗಾ ಜಿಲ್ಲೆಗೆ ಹೋಗಿದ್ದೆ. ಅಲ್ಲಿ ಮಳೆ ವಿಪರೀತ ಬಂದು ದಿನದ ೨೪ ಗಂಟೆಕಾಲವೂ ನೀರು ನಿಂತಿದ್ದರಿಂದ ಬೆಳೆದಿದ್ದಂಥ ತೊಗರಿ ಬೇಳೆ ಸಂಪೂರ್ಣವಾಗಿ ನಾಶವಾಗಿ ಹೋಯಿತು. ಈಗ ಅವರಿಗೆ ಪರಿಹಾರವನ್ನು ಕೊಡಬೇಕಾದರೆ ಯಾವ ಆಧಾರವನ್ನು ತೆಗೆದುಕೊಳ್ಳಬೇಕು ? ಮಳೆ ವಿಪರೀತವಾಗಿ ಬಂದು ೨೪ ಗಂಟೆಗಳಕಾಲ ನೀರು ನಿಂತರೆ ತೊಗರಿಬೇಳೆ ಸಂಪೂರ್ಣವಾಗಿ ನಾಶವಾಗುತ್ತದೆ. ಅದು ಬೀದರ್‌ನಲ್ಲಿರಬಹುದು, ಗುಲ್ಬರ್ಗಾದಲ್ಲಿರಬಹುದು. ಅದೇ ರೀತಿ ಹತ್ತಿಬೆಳೆ ಇರಬಹುದು, ಮತ್ತೊಂದು ಬೆಳೆ ಇರಬಹುದು. ಆದ್ದರಿಂದ ಬೆಳೆಯ ಆಧಾರದಮೇಲೆ ಪರಿಹಾರ ಕಾಮಗಾರಿಗಳನ್ನು ತೆಗೆದು ಕೊಳ್ಳುವಂತಹ ಒಂದು ಹೊಸ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇನ್ನು ಎಷ್ಟು ಜಿಲ್ಲೆಗಳು, ಎಷ್ಟು ತಾಲೂಕುಗಳು ಈ ಒಂದು ಬರದ ವ್ಯಾಪ್ತಿಯಲ್ಲಿ ಬರುತ್ತವೆಂದು ನೋಡಿದರೆ, ಬೀದರ್ ಗುಲ್ಬರ್ಗಾ, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳನ್ನು ಬಿಟ್ಟರೆ ರಾಜ್ಯದ ಉಳಿದ ಎಲ್ಲ ಜಿಲ್ಲೆಗಳಲ್ಲೂ ಬರ ಇದೆ. ಇಲ್ಲಿನ ಜನರು ಬರದಿಂದ ನರಳುತ್ತಿದ್ದಾರೆ. ಆದರೆ ತಮ್ಮ ಹೇಳಿಕೆಯಲ್ಲಿ ಇದು ಸರಿಯಾಗಿ ಬಂದಿಲ್ಲ ಆದ್ದರಿಂದ ದಯಮಾಡಿ ಒಂತ್ತೊಂದುಸಾರಿ ನೀವೇ ಖುದ್ದಾಗಿ ಹೋಗಿ ನೋಡಿಕೊಂಡು ಬನ್ನಿ ನಮಗೆ ಸಿಕ್ಕರತಕ್ಕ ವ ಹಿತಿಯ ಮೇಲೆ ಸರಿ ಸುಮಾರು ೯೦ ತಾಲೂಕುಗಳಲ್ಲಿ ಜನರು ತುಂಬಾ ತೊಂದರೆಯಲ್ಲಿದ್ದಾರೆ. ಆದ್ದರಿಂದ ನಾನು ತಮ್ಮ ಮುಖಾಂತರ ಸರ್ಕಾರದಲ್ಲಿ ಪ್ರಾರ್ಥಿಸುತ್ತೇನೆ. ಸರ್ಕಾರದವರು ಮತ್ತೊಮ್ಮೆ ಸರಿಯಾದ ಮಾಹಿತಿಯನ್ನು ತರಿಸಿಕೊಳ್ಳಬೇಕು ಬರ ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡುವಾಗ ಚುನಾಯಿತ ಜಿಲ್ಲಾ ಪರಿಷತ್ತುಗಳನ್ನು ಮತ್ತು ತಾಲೂಕು ಪಂಚಾಯಿತಿಗಳನ್ನು ನೀವು ಹೊರಗೆ ಇಟ್ಟರೆ, ಯಾವ ಉದ್ದೇಶದಿಂದ ನೀವು ಹಣವನ್ನು ಖರ್ಚುಮಾಡುತ್ತೀರೋ, ಆ ಉದ್ದೇಶ ಸಫಲವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಇನ್ನು ಲಿಂಗನಪಂಕ್ತಿಗೆ ನೀರು ಬಹಳವಾಗಿ ಬಂದಿದೆ. ಆದರೆ ವಿದ್ಯುಚ್ಛಕ್ತಿಯನ್ನು ರೈತರಿಗೆ ಕೊಡುವಾಗ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಸಮಸ್ಯೆಗಳಿವೆ. ಒಂದು ಕಡೆ ವಿದ್ಯುಚ್ಛಕ್ತಿ ಇದ್ದರೂ ಅದನ್ನು ಉಪಯೋಗ ಮಾಡಿಕೊಂಡು ಅದರಿಂದ ಅಂಡರ್‌ಗ್ರೌಂಡ್‌ನಿಂದ ನೀರನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ ಉದಾಹರಣೆಗೆ ಹೇಳುವುದಾದರೆ ದೇವನಕಳ್ಳಿ ತಾಲೂಕು. ಇತ್ತು ಬಾವಿಯ ಅಂತರ್ ಜಲ ೫೦೦ ಅಡಿಗಳಿಗಿಂತ ಕೆಳಗಡೆ ಹೋಗಿದೆ. ಅದ್ ಬೆಂಗಳೂರು ತಾಲ್ಲೂಕ್‌ನಲ್ಲಿ ೫೦೦ ಅಡಿಗಳಿಗಿಂತಲೂ ಕಡಿಮೆ ಹೋಗಿದೆ. ೫೫೦ ಅಡಿಯವರೆಗೆ ಬೋರ್ ಪಾಕಿಯಾದರೂ ಬೆಳೆ ಬೆಳೆಯಬೇಕೆಂದು ರೈತರು ಪ್ರಯತ್ನ ಮಾಡಿದ್ದಾರೆ. ಆದು ಗುಜರಾತ್‌ನಿಂದ ಸೈಕ್ಲೋನ್ ರಿಗ್ಸ್ ಎಂದು ತರಿಸಿದ್ದಾರೆ ಆ ಸೈಕ್ಲೋನ್ ರಿಗ್ಸ್ ಬಂದಿದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ. ಈ ಮಧ್ಯೆ ಸೈಕ್ಲೋನ್ ಅಂತೂ ಬಂದು ಹೋಯಿತು. ಬಂದ ಥ ಸೈಕ್ಲೋನ್ ಇದ್ದ ಅಲ್ಪ ಸ್ವಲ್ಪ ಬೆಳೆಯನ್ನು ಸಹ ಕೆಡಿಸಿದೆ ಈ ಸೈಕ್ಲೋನ್ ರಿಗ್ಸ್ ತರಿಸಿ ೫೦೦-೬೦೦ ಅಡಿ ಕೆಳಗೆ ಭೂಗರ್ಭದಲ್ಲಿರುವ ನೀರನ್ನು ಮೇಲಕ್ಕೆ ಎತ್ತುವುದಕ್ಕೆ ಎರಡನೇ ಸ್ಟೇಜ್ ಮೂರನೆ ಸ್ಟೆಜ್ ಎಂದು ಪಂಪ್ ಬೆ ಕಾಗುತ್ತದೆ. ಅದಕ್ಕೆ ೧೫ ಹೆಚ್.ಪಿ ಮೊ ಟಾರ್ ಬೇಕಾಗುತ್ತದೆ ಇಲ್ಲದಿದ್ದರೆ ನೀರನ್ನು ಮೇಲಕ್ಕೆ ತರಲಿಕ್ಕೆ ಸಾಧ್ಯವಾಗುವುದಿಲ್ಲ. ೧೫ ಹೆಚ್ ಪಿ ಸಬ್‌ಮರ್ಸಿಬಲ್ ಪಂಪ್ ಕೆಳಗಡೆ ಹಾಕಿದರೆ, ನೀವು ಕೊಡತಕ್ಕಂಥ ಕರೆಂಟ್ ಡ್ರಾಪ್ ಆಗುತ್ತದೆ ವೋಲ್ಟೇಜ್ ಕಡಿಮೆ ಯಾಗುತ್ತದೆ. ವೋಲ್ಟೇಜ್ ಕಡಿಮೆಯಾದರೆ ನೀರು ಮೇಲೆ ಬರುವುದಿಲ್ಲ ಸರಿಸುಮಾರಾಗಿ ಒಂದು ಲಕ್ಷ ರೂಪಾಯಿಗಿಂತಲೂ ಹೆಚ್ಚು ಒಂದು

ಬೋರ್‌ವೆಲ್ ತೆಗೆಸಿದ ರೈತನಿಗೆ ಖರ್ಚಾಗುತ್ತದೆ. ಇದೆಲ್ಲ ಆದಮೇಲೆ ಹೊಸ ಸಮಸ್ಯೆ ಏನು ? ಅವನಿಗೆ ಈ ಕರೆಂಟ್‌ನಿಂದ ನೀರನ್ನು ಎತ್ತುವುದಕ್ಕಾಗುವುದಿಲ್ಲ. ಕಾರಣವೆನೆಂದರೆ, ಈ ಕರೆಂಟ್‌ಗೆ ಸಾಮರ್ಥ್ಯ ಸಾಲುವುದಿಲ್ಲ. ೫೦ ಅಡಿ ಕೆಳಗಿರುವ ನೀರನ್ನು ಎತ್ತಬೇಕಾದರೆ ಏನು ಮಾಡುವುದು ? ಅದಕ್ಕೆ ಮತ್ತೊಂದು ಭೂಸ್ಟರ್ ಹಾಕಿಸಬೇಕು. ಅದಕ್ಕೆ ಎಂಟರಿಂದ ಹತ್ತುಸಾವಿರ ರೂಪಾಯಿ ಗಳಾಗುತ್ತದೆ. ಇದು ಸನ್ಯಾಸಿ ಬೆಕ್ಕು ಸಾಕಿದ ಕಥೆಯಾಗುತ್ತದೆ.

ಶ್ರೀ ಮಾಟಾಳ್ ನಾಗರಾಜ್.—ಆ ಕಥೆಯನ್ನು ಹೇಳಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಸನ್ಯಾಸಿ ಕಾಟಕ್ಕೆ ಬೆಕ್ಕನ್ನು ಸಾಕಿದ. ಆದರೆ ಸನ್ಯಾಸಿಗೆ ಬೆಕ್ಕನ್ನು ಸಾಕಿದ ಮೇಲೆ ಅದಕ್ಕೆ ಹಾಲುಬೇಕೆಂದು ಗೊತ್ತಾಯಿತು. ಆದಕ್ಕಾಗಿ ಒಂದು ಹಸುವನ್ನು ಸಾಕಿದ. ಹಸು ಇದೆ ಎಂದು ಗೊತ್ತಾದ ಮೇಲೆ ಅದನ್ನು ಕಾಯುವುದಕ್ಕೆ ಜನ ಬೇಕಾಯಿತು. ಅದಕ್ಕೆ ಜನ ತಂದಿಟ್ಟ. ಹೀಗೆ ಅವನ ಸಂಸಾರ ಬೆಳೆಯುತ್ತಾ ಬೆಳೆಯುತ್ತಾ ಸನ್ಯಾಸಿ ಆಗಿ ಇದ್ದವನ್ನು ಕೊನೆಗೆ ಸಂಸಾರಿಯಾದ.

ಶ್ರೀ ಮಾಟಾಳ್ ನಾಗರಾಜ್.—ಕೊನೆಗೆ ಅವನಿಗೆ ಮಕ್ಕಳೂ ಸಹ ಆದವು ಎಂದು ಕಾಣುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಹಾಗೆ ಈ ರೈತ ಆಳವಾಗಿರತಕ್ಕಂಥ ಕೊಳವೆ ಬಾವಿಯನ್ನು ತೆಗೆಸಿ ವ್ಯವಸಾಯಕ್ಕೆ ನೀರು ಬಳಕೆ ಮಾಡಿಕೊಳ್ಳಬೇಕೆಂದರೆ ಪರಿಸ್ಥಿತಿ ಈಗ ಎಲ್ಲಿಗೆ ಹೋಗಿದೆ ಮೊದಲು ನೀರನ್ನು ಹುಡುಕಿಕೊಂಡು ಬರಬೇಕು. ಅವನು ಯಾರೋ ಕಡ್ಡಿಯನ್ನು ಹಿಡಿದುಕೊಂಡು ಬರುತ್ತಾನೆ ಅವನು ನೋಡಿ ಇಂಥ ಕಡೆ ನೀರು ಸಿಗುತ್ತದೆಂದು ಟ್ರಯಲ್ ಮಾಡಿಹೇಳುತ್ತಾನೆ. ಅವನು ಪ್ರಯತ್ನ ಮಾಡಿ ಫಲ ಸಿಕ್ಕಿದರೂ ಸಿಕ್ಕಬಹುದು, ಇಲ್ಲ ಸಿಗದಿರಬಹುದು. ೧೮೦ ಅಡಿಗಳವರೆಗೆ ಕೇಸಿಂಗ್ ಪೈಪನ್ನು ಹಾಕಬೇಕು. ಸರಿ ಸುಮಾರು ೧೮೦ರಿಂದ ೧೯೦ ಅಡಿಗಳವರೆಗೆ ಬೆಂಗಳೂರಿನ ಕೆಲವು ಭಾಗಗಳಲ್ಲಿ ಪೈಪ್‌ಗಳನ್ನು ಹಾಕುವುದಕ್ಕೆ ಸುಮಾರು ೪೦-೫೦ ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಆಮೇಲೆ ಪಂಪ್‌ಹಾಕಿ ಎಲ್ಲ ವ್ಯವಸ್ಥೆ ಮಾಡುವ ಹೊತ್ತಿಗೆ ಒಂದು ಬಾವಿಗೆ ಸುಮಾರು ಹತ್ತಿರ ಹತ್ತಿರ ಒಂದು ಲಕ್ಷ ರೂಪಾಯಿಗಳವರೆಗೆ ಖರ್ಚಾಗುತ್ತದೆ. ಇಷ್ಟೆಲ್ಲ ಖರ್ಚು ಮಾಡಿದರೂ ಕರೆಂಟ್ ಇಲ್ಲ. ಪಾಪ ಕರೆಂಟ್ ಇದೆ ಎಂದು ತಿಳಿದು ಆತನು ಖರ್ಚುಮಾಡುತ್ತಾನೆ. ಕರೆಂಟ್ ಇದ್ದರೂ ಕೆಳಗಡೆ ಇರತಕ್ಕಂಥ ನೀರನ್ನು ಮೇಲೆ ಎತ್ತತಕ್ಕಂಥ ಸಾಮರ್ಥ್ಯ ಇರುವುದಿಲ್ಲ. ಶ್ರೀಮಾನ್ ಮಾಟಾಳ್ ನಾಗರಾಜ್‌ರವರು ಹೇಳಿದಂತೆ ಚಾಮರಾಜನಗರ ಮತ್ತು ಅದರ ಆಕ್ಕ ಪಕ್ಕದಲ್ಲಿರತಕ್ಕಂಥವರ ಸಮಸ್ಯೆ ಏನೆಂದರೆ, ಡ್ರಿಪ್ಪಿಂಗ್ ಲೋ ಓಲ್ಟೇಜ್. ಅದಕ್ಕೆ ಅದೇನೋ ೧೧ ಕೆ.ವಿ ಎಂದು ಹೇಳುತ್ತಾರೆ, ಮತ್ತು ಚಿಕ್ಕ ಚಿಕ್ಕ ಕೆ.ವಿ. ಬದಾಯಕಿಸೆ ಚಾಮರಾಜನಗರದಲ್ಲಿ ಬೇರೆ ಏನೋ ಹಾಕಿದ್ದಾರೆ. ಅಲ್ಲಿಂದ ಮುಂದಕ್ಕೆ ಇಲ್ಲ, ಏತನ್‌ಮಧ್ಯೆ ಮಧ್ಯೆ ಮಧ್ಯೆ ಕರೆಂಟ್ ಹೋಗತಕ್ಕಂಥದ್ದು. ಇಷ್ಟೆಲ್ಲ ಪಾತಾಳಕ್ಕೆ ಹೋಗಿ ಪಾಡುಪಟ್ಟರೂ, ಕೆಲವು ಸಲ ಇಂಜಿನ್ ಸುಟ್ಟು ಹೋಗುತ್ತದೆ. ಆಗ ಸುಟ್ಟುಹೋದ ಎಂಜಿನ್‌ನನ್ನು ೫೦ ಅಡಿ ಆಳದಿಂದ ವಾಪಸ್ ಮೇಲಕ್ಕೆ ತಂದು ರಿಪೇರಿ ಮಾಡಿಸಲು ಆ ರೈತನ ಬವಣೆ ಬೇಡ. ಸರ್ಕಾರ ಒಂದುಕಡೆ ರೈತರಿಗೆ ಬೇಕಾಗಿರತಕ್ಕಂಥ ಬಾವಿ ತೋಡುವುದಕ್ಕೆ ಸ್ಕೆಕ್ಲೋನ್ ರಿಗ್ಸ್ ಗುಜರಾತ್‌ನಿಂದ ತರಿಸ ತ್ತೇವೆಂದು ಹೇಳಿದರು. ಅದನ್ನೆನಾದರು ತರಿಸಿದ್ದೀರಾ ? ಕನಿಷ್ಠಪಕ್ಷ ಕಂಡಿಯವ ನೀರಿನ ವ್ಯವಸ್ಥೆ ಗೋಸ್ಕರವಾಗಿಯಾದರೂ ಆಲೋಚನೆ ಮಾಡಿದ್ದೀರಾ ಏನ್ನುವುದನ್ನು ಮಾನ್ಯ ಮಂತ್ರಿಗಳಿಂದ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಲಿಂಗನಮಕ್ಕಿಗೆ ತುಂಬಾ ನೀರು ಬಂತು. ಬಹಳ ಸಂತೋಷವಾಯಿತು. ಈ ಸಾರಿ ವಿದ್ಯುಚ್ಛಕ್ತಿ ಅಭಾವ ಇಲ್ಲವೆಂದು ನಮಗೆ ಆನಂದವಾಯಿತು ಆದರೆ ೬ ಗಿರುವಷ್ಟು ಅಭಾವ ಆದು ತುಂಬದೇ ಇರುವಾಗ ಇರಲಿಲ್ಲ. ಅಂದರೆ ಎಲ್ಲೋ ಮ್ಯಾನೇಜ್‌ಮೆಂಟ್‌ನಲ್ಲಿ ದೋಷ ಇರಬೇಕು. ಈ ದೋಷವನ್ನು ಸರಿಪಡಿಸುವುದಕ್ಕೆ ಕಂದಾಯ ಮಂತ್ರಿಗಳು ಉತ್ತರಿಸುವುದಿದ್ದರೆ ಉತ್ತರಿಸಲಿ. ಇಲ್ಲದಿದ್ದರೆ ಎಲ್ಲಾ ಖಾತೆಗಳನ್ನು ಇಟ್ಟುಕೊಂಡಿರುವ ಮುಖ್ಯ ಮಂತ್ರಿಗಳೇ ಉತ್ತರ ಹೇಳಿದರೆ ನಮಗೆ ಸ್ವಲ್ಪ ಸಮಾಧಾನವಾಗಬಹುದು. ಅಥವಾ ಹೊರಗಡೆ ಇರತಕ್ಕ ರೈತ ಸಮುದಾಯಕ್ಕೆ ಈ ಸರ್ಕಾರ ಏನಾದರು ಆಸಕ್ತಿ ವಹಿಸುತ್ತದೆಂಬ ವಿಶ್ವಾಸ ಬರುವುದಕ್ಕೆ ಸಾಧ್ಯವಿದೆ. ಆ ಕಾರಣದಿಂದ ಸುಮಾರು ೯೦ ತಾಲ್ಲೂಕುಗಳಲ್ಲಿ ನಾವು ಪ್ರವಾಸ ಹೋದಾಗ ಇಂಥ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಚಾಮರಾಜನಗರ ತಾಲ್ಲೂಕಿವಲ್ಲಿ ನಾವು ಹೋಗಿ ಒಂದು ತಿಂಗಳಾಯಿತು. ಆಗಲೇ ಮಾಡಿಕೆಯಂತೆ ೧೪ಳಳ.೬ ಎಂ ಎಂ ಚಾಮರಾನಗರ ದಲ್ಲಿ ಕಡಿಮೆ ಆಗಿದೆ ಎಂದು ಹೇಳಿದ್ದಾರೆ. ಇದರ ಮಾಹಿತಿಯನ್ನು ನೀವು ನವ ಗೆ ಒದಗಿಸಿಲ್ಲ. ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಮಳೆ ಬಂದಿದೆ ಇಷ್ಟು ಕಡಿಮೆಯಾಗಿದೆ. ಬಂದಿರತಕ್ಕ ಮಳೆ ಸಹ ಅಕಾಲಿಕವಾಗಿ ಅಥವಾ ಸಕಾಲಿಕವಾಗಿ ಬಂದಿದೆಯೋ ಎಂಬ ಮಾಹಿತಿಯನ್ನು ಒದಗಿಸಿಲ್ಲ ಗುಂಡ್ಲಪ ತಾಲ್ಲೂಕಿನಲ್ಲಿ ಸರಾಸರಿಗಿಂತ ೨೦೨.೩ ಎಂ.ಎಂ. ಮಳೆ ಆಗಲೇ ಕಡಿಮೆ ಇದೆ ಎಂದು ಹೇಳಿದ್ದಾರೆ.

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಕೂಡ ಕಳೆದ ವರ್ಷಕ್ಕಿಂತ ೧೦ಳಿ ಎಂ.ಎಂ. ಮಳೆ ಕಡಿಮೆ ಆಗಿದೆ ಎಂದು ಎರಡು ತಿಂಗಳ ಹಿಂದಿನ ವರದಿಯನ್ನು ನಾನು ಕೊಡುತ್ತಿದ್ದೇನೆ. ಹುಣಸೂರು ತಾಲ್ಲೂಕಿನಲ್ಲಿ ೨೧೧ ಗ್ರಾಮಗಳ ಪೈಕಿ ೨೦೫ ಗ್ರಾಮಗಳು ಹಾನಿಗೆ ಒಳಗಾಗಿವೆ. ಅಂದಾಜನ್ನು ಅವರು ಕೊಡುವಾಗ ಒಂದೊಂದು ತಾಲ್ಲೂಕಿನಲ್ಲಿ ಲಕ್ಷಗಳಿಗೆ ಲೆಕ್ಕವಿಲ್ಲದಷ್ಟು ಅಂದಾಜನ್ನು ಕೊಟ್ಟಿದ್ದಾರೆ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕೂಡ ಒಟ್ಟು ೫೫ ಗ್ರಾಮಂಗಳಲ್ಲಿ ಖುಷ್ಕಿ ಬೆಳೆಗೆ ತೀವ್ರ ಹಾನಿಯಾಗಿದೆ ಒಂದು ವರದಿ ಇದೆ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ೪೭೪೧೨ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು ಒಟ್ಟು ೧೨ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಹಾನಿಗೆ ಈಡಾಗಿದೆ ಎಂದೂ ವರದಿ ಕೊಡುತ್ತಾರೆ. ನಾನು ಈಗ ಎಲ್ಲಾ ತಾಲ್ಲೂಕುಗಳ ವಿವರಗಳಿಗೆ ಹೋಗುವುದಿಲ್ಲ. ಇಲ್ಲಿ ಗುಂಡಲಪೇಟೆ ಮಂತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳಲ್ಲಿ ನೂರಾರು ನೀರಾವರಿ ಪಂಪ್‌ಸೆಟ್ಟುಗಳನ್ನು ಆಳವಡಿಸಿದ್ದಾರೆ. ಕೆ.ಇ.ಬಿ.ಯವರಿಗೆ ೩೩ ಕಿಲೋವ್ಯಾಟ್ಸ್ ಲೈನ್ ಆಗಿ ಈಗಿರುವ ಲೈನನ್ನು ಪರಿವರ್ತನೆ ಮಾಡಿಕೊಡಿ ಎಂದು ಪದೇ ಪದೇ ಹೇಳಿದ್ದಾರೆ. ಇದುವರೆಗೆ ಆ ಪ್ರಯತ್ನ ನಡೆದಿಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ನಂಜನಗೂಡಿನಲ್ಲಿ ಕೂಡ ಪವರ್ ಸಪ್ಲೈ ಇಲ್ಲ. ಅದು ಗಡಿ ತಾಲ್ಲೂಕು ಅಲ್ಲದೆ ಮೀಸಲು ಕ್ಷೇತ್ರ. ಎಷ್ಟು ಸಾರಿ ಹೇಳಿದರೂ ಸಂಬಂಧಪಟ್ಟವರು ಕೇಳುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಈ ಅನಾವೃಷ್ಟಿಯನ್ನು ಎದಂರಿಸುವ ಬಗ್ಗೆ ನಾನು ಹಿಂದಿನ ಹಣಕಾಸಿನ ಮಂತ್ರಿಗಳ ಜೊತೆ ಮಾತನಾಡಿದ್ದೆ. ಮೈಸೂರು ಜಿಲ್ಲೆಗೆ ಹಣದ ಕೊರತೆ ಇಲ್ಲವೆಂದು ಹೇಳಿದ್ದರು ಏಕೆಂದರೆ ಅವರು ಬಹಳ ಹಣವನ್ನು ಕೂಡಿ ಹಾಕುತ್ತಿದ್ದರು ಎಲ್ಲಿಯಾದರೂ ಒಂದು ಭಾಗ ಹಣ ಖರ್ಚು ಮಾಡುವುದಕ್ಕೆ ಸಿಕ್ಕಿದ್ದರೆ ಈಗಲಾದರೂ ಖರ್ಚು ಮಾಡಿ ಎಂದು ಹೇಳಿದ್ದೆ. ಅವರಿಗೆ ಧಾರಾಳವಾಗಿ ಖರ್ಚು ಮಾಡುವ ಮನಸ್ಸು ಅವರಿಗೆ ಇತ್ತು. ಆಮೇಲೆ ಏನಾಗಿದೆಯೋ ಗೊತ್ತಿಲ್ಲ. ಈಗ ಯಾವ ಇಲಾಖೆಗೆ ಯಾವ ಮಂತ್ರಿಗಳು ಎಂದು ವಿವರ ತಿಳಿದಿಲ್ಲ. ಈ ಬಗ್ಗೆ ವಿವರಣೆ ಕೊಡುವವರು ಯಾರು?

ಶ್ರೀ ವಾಟಾಳ್ ನಾಗರಾಜ್—ಗೃಹ ಸಚಿವರು ಗಂಭೀರವಾಗಿ ಕುಳಿತ್ತಿದ್ದಾರೆ. ಅವರು ಮುನಿಸಿ ಕೊಂಡಿದ್ದಾರೋ ಏನೋ ಗೊತ್ತಿಲ್ಲ ಬಹುಶಃ ಗಂಭೀರವಾಗಿ ಎಲ್ಲವನ್ನು ಬರೆದುಕೊಂಡು ಮುಖ್ಯ ಮಂತ್ರಿಗಳಿಗೆ ಕೊಡೋಣವೆಂದು ಕುಳಿತಿರಬಹುದು. ಸರ್ಕಾರಕ್ಕೆ ಜಂಟಿ ಜವಾಬ್ದಾರಿ ಇದೆ ಅನ್ನುವುದಾದರೆ ಒಬ್ಬರೇ ಕುಳಿತುಕೊಳ್ಳುವುದು. ಒಳ್ಳೆಯದು ಅಧಿಕಾರಿಗಳು ಬರೆದುಕೊಟ್ಟ ಉತ್ತರವನ್ನು ಕೊಡುವುದಾದರೆ ಅದನ್ನು ನಾವು ಒಪ್ಪುವುದಿಲ್ಲ.

ಶ್ರೀ ಕೆ.ಜೆ. ಜಾರ್ಜ್.—ನಿನ್ನೆಯ ದಿವಸ ಮುಖ್ಯ ಮಂತ್ರಿಗಳು ಸರಿಯಾಗಿ ಉತ್ತರ ಕೊಟ್ಟಿದ್ದಾರೆ. ಅದು ಅಧಿಕಾರಿಗಳು ಬರೆದುಕೊಟ್ಟಿದ್ದು ಅಲ್ಲ, ಅವರು ಸರಿಯಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಖಾತೆ ಒಬ್ಬರದ್ದು, ಉತ್ತರ ಹೇಳುವುದು ಮತ್ತೊಬ್ಬರು. ಹೆಸರು ಒಂದು, ಇನ್ನೊಂದು ಬೇರೆ ಅನ್ನುವ ಪ್ರಶ್ನೆ ಬೇಡವೆಂದು ನಾನು ಹೇಳಿದ್ದು.

ಶ್ರೀ ಎಲ್.ಆರ್. ಶಿವರಾಮೇಗೌಡ.— ನಿನ್ನೆ ಮುಖ್ಯಮಂತ್ರಿಗಳು ವಿತಕ್ಕೆ ಉತ್ತರ ಕೊಟ್ಟರು ಎಂದೆ ಗಲಭೆ ಪೀಡಿತ ಪ್ರದೇಶಗಳಿಗೆ ಅವರೇ ನೇರವಾಗಿ ಹೋಗಿ ಬಂದಿದ್ದರಿಂದ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೆ, ಈ ಸರ್ಕಾರಕ್ಕೆ ಅಡ್ವೋಕೇಟ್ ಜನರಲ್ ಇದ್ದಾರೋ ಇಲ್ಲವೋ ಗೊತ್ತಿಲ್ಲ, ಶಿವರಾಮೇಗೌಡರನ್ನು ಏನಾದರೂ ಅಡ್ವೋಕೇಟ್ ಜನರಲ್ ಅನ್ನಾಗಿ ಇವರು ಅಪಾಯಿಂಟ್ ಮಾಡಿದ್ದಾರೇನೋ ಎಂಬ ಅನುಮಾನ ನನಗೆ.

ಶ್ರೀ ಎಲ್. ಆರ್. ಶಿವರಾಮೇಗೌಡ —ಒಂದು ಸಾರಿ ಮಂತ್ರಿಯಾಗಿ ಎಂದು ಹೇಳುತ್ತೀರಿ ಒಂದುಸಾರಿ ಛೇರ್ಮನ್ ಮಾಡಿ ಎಂದು ಹೇಳುತ್ತೀರಿ. ಒಂದು ಸಾರಿ ಅಡ್ವೋಕೇಟ್ ಜನರಲ್ ಎಂದು ಹೇಳುತ್ತೀರಿ ನಾಳೆ ಏನು ಮಾಡುತ್ತಿರೋ ನೋಡಬೇಕು ಸಿಂಧ್ಯಾ ಅವರೇ,

ಶ್ರೀ ವಾಟಾಳ್‌ನಾಗರಾಜ್.— ಅವರಿಗೇನು ಕೊಟ್ಟರೂ ನನಗಂತೂ ಆಸೆ ಇದೆ ಅವರಿಗೆನಾದರೂ ಕೊಡುವುದಿದ್ದರೆ ಬೇಗ ಕೊಟ್ಟುಬಿಡಿ.

ಛೇರ್ಮನ್ .— ಅವರನ್ನು ಕರೆದುಕೊಂಡು ಹೋಗಿ ಲಾ ಕಾಲೇಜಿಗೆ ಸೇರಿಸಿ ಬನ್ನಿ

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅಂದರೆ ಲಾನೂ ಮಾಡಿಲ್ವಾ ಅವರು?

ಶ್ರೀ ಡಿ. ಬಿ. ಚಂದ್ರೇಗೌಡ. ಅವರು ಈ ಸರ್ಕಾರದಲ್ಲಿಂತೂ ಮಂತ್ರಿಯಾಗುವುದು ಸಾಧ್ಯವಿಲ್ಲ. ಅದು ಮರೆತುಬಿಡಿ. ಏಕೆಂದರೆ ಅವರು ಮಂತ್ರಿಯಾದರೆ ಕೊಹಿಲಿಷನ್‌ಗೌರ್ನಮೆಂಟ್ ಆಗುತ್ತದೆ

ಶ್ರೀ ವಾಟಾಳ್ ನಾಗರಾಜ್.— ಅವರು ನಮ್ಮ ಸ್ನೇಹಿತರು. ನಾನು ಅವರ ಪಾರ್ಟಿಯವರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಒಂದು ಮಂಡಲಿ ಅಧ್ಯಕ್ಷಗಿರಿಯಾದರೂ ಕೊಡಿ.

ಒಬ್ಬ ಮಾನ್ಯ ಸದಸ್ಯರು.—ಯಾವ ಮಂಡಲಿ?

ಶ್ರೀ ವಾಟಾಳ್ ನಾಗರಾಜ್.— ಕೊಳಚೆ ಮಂಡಳಿಯಾದರೂ ಕೊಡಲಿ. ಯಾವುದಾದರೂ ಒಂದು ಕೊಡಲಿ. ನಾನು ಅಭಿಮಾನದ ಮೇಲೆ ಹೇಳುತ್ತಿದ್ದೇನೆ. ಶಿವರಾಮೇಗೌಡರಿಗೆ ಕೊಡಬೇಕು.

ಶ್ರೀ ಎಂ. ಪಿ. ವೆಂಕಟೇಶ್.—ಕೊಳಚೆ ಮಂಡಲಿ ಕೊಟ್ಟರೆ ರಮೇಶ್ ಅವರು ಒಪ್ಪುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಹೋಗಲಿ, ಬಿ.ಡಿ.ಎ.ನೀ ಕೊಡಿ ಸಂತೋಷ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷಣಿಯವರೆ, ಈ ಒಂದು ಹೇಳಿಕೆಯಲ್ಲಿ ಏನೊಂದು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಇದು ತತ್‌ಕ್ಷಣ ಸರ್ಕಾರಿ ಅಧಿಕಾರಿಗಳು ಒದಗಿಸಿರತಕ್ಕ ಮಾಹಿತಿಗಳಷ್ಟೆ. ಮಾನ್ಯ ಮಂತ್ರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ಒಂದು ಸಾರಿಯೂ ಅಧ್ಯಯನ ಮಾಡಲಿಲ್ಲ. ೧೫ ದಿವಸಕ್ಕೊಂದು ಸಾರಿ ರೆವ್ಯೂ ಮಾಡುತ್ತೇವೆಂದು ಏತಕ್ಕೆ ಇದರಲ್ಲಿ ಬರೆಯುತ್ತೀರಿ ? ನೀವು ಮಂತ್ರಿಗಳಾದ ಮೇಲೆ ಮಾಡಿಲ್ಲ. ಕಳೆದ ಎರಡೂವರೆ ತಿಂಗಳಿಂದ ಸರ್ಕಾರ ಇಲ್ಲ. ಮತ್ತೆ ಯಾರು ಮಾಡಿದ್ದಾರೆ ರಿವ್ಯೂ? ಎಷ್ಟು ಸಭೆಗಳಲ್ಲಿ ಮಂತ್ರಿಗಳು ರಿವ್ಯೂ ಮಾಡಿದ್ದಾರೆ? ಬೆಂಗಳೂರಿನಲ್ಲಿ ಕುಳಿತುಕೊಂಡು ವರದಿ ತರಿಸಿ ಆದನ್ನು ಒಪ್ಪುವುದಾದರೆ ಅದಕ್ಕಾಗಿ ಇಷ್ಟು ದೊಡ್ಡ ಪ್ರಮಾಣದ ಚುನಾವಣಾ ವ್ಯವಸ್ಥೆ, ಅದಕ್ಕೆ ಒಂದು ಮಂತ್ರಿಮಂಡಲ, ಅದಕ್ಕೆ ಒಂದು ಶಾಸನಸಭೆ ಇದೆಲ್ಲಾ ಬೇಕಾಗೇ ಇಲ್ಲ.

ಒಬ್ಬ ಮಾನ್ಯ ಸದಸ್ಯರು.—ಜಿಲ್ಲಾ ಮಂತ್ರಿಗಳಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಜಿಲ್ಲಾ ಮಂತ್ರಿಗಳೂ ಇಲ್ಲ ; ಯಾರೂ ಇಲ್ಲ. ರಾಜ್ಯದಲ್ಲಿ ಎಲ್ಲಿದ್ದಾರೆ ಮಂತ್ರಿಗಳು? ಆದ್ದರಿಂದ ರಿವ್ಯೂ ಬಗ್ಗೆ ಏನು ಕೊಟ್ಟಿದ್ದಾರೆ. ಆದನ್ನು ಒಪ್ಪಿಕೊಳ್ಳುವುದಕ್ಕೆ ನಾನು ಸಿದ್ದವಿಲ್ಲ. ವಿಶೇಷವಾಗಿ ಮಲೆನಾಡಿನಲ್ಲಿ ಒಂದು ಕಾಲಕ್ಕೆ ೧೨-೧೫ ಅಡಿ ತೆಗೆದರೆ ನೀರು ಸಿಗುತ್ತಿತ್ತು. ಇವತ್ತು ೩೦೦ ಅಡಿಗೆ ಹೋದರೂ ಕುಡಿಯುವ ನೀರು ಸಿಗುತ್ತಿಲ್ಲ. ಇವತ್ತು ಪೂರಕವಾಗಿ ಚರ್ಚೆ ಮಾಡುತ್ತಿದ್ದೇವೆ. ಇದರ ಪೂರ್ಣ ಮಾಹಿತಿ ಸಿಗುವುದು ಏಪ್ರಿಲ್ ಮೇ ತಿಂಗಳಲ್ಲಿ. ಆಲ್ಲಿಯವರೆಗೆ ಹಾಗೋ ಹೀಗೋ ಮೇಲುಗಡೆ ಇರತಕ್ಕ ನೀರು ಸಿಗಬಹುದು. ಅಲ್ಲಿಂದಾಚೆಗೆ ಕಷ್ಟ. ತೀರ್ಥಹಳ್ಳಿ, ಮೂಡಿಗೆರೆ, ಕೊಪ್ಪ, ಶೃಂಗೇರಿ ಭಾಗದಲ್ಲಿ ೩೦೦ ಅಡಿಗಿಂತ ಮೇಲೆ ನೀರು ಸಿಗುವುದಿಲ್ಲ. ಅದಕ್ಕಿಂತ ಕೆಳಗೆ ಹೋಗಲು ಗಾಬರಿ. ಏಕೆಂದರೆ ಅದಕ್ಕಿಂತ ಕೆಳಗೆ ಹೋದರ ನೀರಿನ ಬದಲು ಎಣ್ಣೆ ಸಿಗುತ್ತದೆ. ಅಂಥ ಪರಿಸ್ಥಿತಿ ಇದೆ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ೫೦೦ ಅಡಿ ಕೆಳಗೆ ನೀರು ಸಿಗುವುದಿಲ್ಲ. ನನ್ನ ವೈಯುಕ್ತಿಕ ಅನುಭವ ಹೇಳುತ್ತಿದ್ದೇನೆ. ೫೫೦ ಅಡಿ ಆಳದ ಬಾವಿ ನಾನು ತೆಗೆಸಿದ್ದೇನೆ. ಅದಕ್ಕಿಂತ ಮೇಲೆ ನೀರು ಸಿಗುತ್ತಿಲ್ಲ. ಆದ್ದರಿಂದ ಕುಡಿಯುವ ನೀರಿಗೆ ಇಗತಕ್ಕ ತೊಂದರೆಯನ್ನು ಪರಿಹರಿಸುವುದಕ್ಕೆ ಹಿಂದೆ ಆಗಿನ ಮುಖ್ಯಮಂತ್ರಿಗಳು ಕೊಟ್ಟಿದ್ದಂಥ ಭರವಸೆ ಏನಿದೆ, ಸೈಕ್ಲೋನ್ ರಿಗ್ಸ್ ತರಿಸುತ್ತೇವೆಂದು ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಎಷ್ಟು ರಿಗ್ಸ್ ಬಂದಿವೆ? ಗುಜರಾತ್‌ನಿಂದ ಮಹಾರಾಷ್ಟ್ರದಿಂದ ಬರುತ್ತದೆಂದು ಹೇಳಿದರು. ಅದು ಬಂತೆ ? ಬರದಿದ್ದರೆ ಇಂಥ ಆಶ್ವಾಸನೆಗಳನ್ನು ಈ ಸದನಕ್ಕೆ ಏತಕ್ಕೆ ಕೊಡುತ್ತೀರಿ ? ಮಾನ್ಯ ಅಧ್ಯಕ್ಷಣಿಯವರೆ, ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ. ಮೊದಲು ತತ್‌ಕ್ಷಣಕ್ಕೆ ಶಾಸನಸಭೆ ಮುಗಿದ ತಕ್ಷಣವೇ ಮಂತ್ರಿಗಳು ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ಭೇಟಿ ಕೊಟ್ಟು, ಎಲ್ಲಿ ಅಭಾವಕ್ಕೆ ತುತ್ತಾಗಿರುವ ಕಡೆಗಳಲ್ಲಿ ಸ್ವತ: ಭೇಟಿ ಕೊಟ್ಟು ಅಲ್ಲಿರತಕ್ಕ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಆದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಿ ಎಂದು ನಾನು ಭಾವನೆ ಮಾಡಿದ್ದೇನೆ.

ಏಕೆಂದರೆ ಮಾನ್ಯ ಖರ್ಗೆಯವರು ಈಗತಾನೇ ಕೆಂದಾಯ ಮಂತ್ರಿಗಳು ಆಗಿರುವುದು ಅಲ್ಲ. ಹಿಂದೆ ಕೆಂದಾಯ ಮಂತ್ರಿಗಳಾಗಿದ್ದ ಅನುಭವ ಅವರಿಗೆ ಇದೆ. ಆ ಅನುಭವದ ಆಧಾರದ ಮೇಲೆ ತಕ್ಷಣ ಅವರು ಬೇರೆ ಬೇರೆ ಜಿಲ್ಲೆಗಳಲ್ಲಿನ ಅಭಾವಪರಿಸ್ಥಿತಿ ಬಗ್ಗೆ ಅದರಲ್ಲೂ ವಿಶೇಷವಾಗಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಗಮನಹರಿಸಿ ಅದನ್ನು ಒದಗಿಸುವ ಹೊಣೆಗಾರಿಕೆಯನ್ನು ಕೊಡಬೇಕು. ಇವತ್ತು ನೀರು ಒದಗಿಸುವ ಹೊಣೆಗಾರಿಕೆ ಯಾರದ್ದು ? ಸರ್ಕಾರ ಎಂದರೆ ಒಂಟೀ ಜವಾಬ್ದಾರಿ. ಆದರೆ ನಿನ್ನೆ ಒಂದು ಪ್ರಶ್ನೆಗೆ ಉತ್ತರ ಬಂದಿದ್ದು ನೆನಪಿದೆ, ಭೂಶಾಸನದ ಮಂಡಲಿಗಳನ್ನು ರಚನೆ ಮಾಡುವುದಕ್ಕೆ ಕೆಂದಾಯ ಮಂತ್ರಿಗಳಿಂದ ಕಡತ ಮುಖ್ಯಮಂತಿ ಗಳಿಗೆ ಹೋಗಿ ಅಲ್ಲಿ ಕೊಳೀತಾ ಬಿದ್ದಿದೆ ಎಂದು ಹೇಳಿದರು. ಇದು ಜಂಟೀ ಜವಾಬ್ದಾರಿ ಆಗುವುದಿಲ್ಲ ನನಗೆ ಅರ್ಥವಾಗುತ್ತದೆ ಯಾವುದೇ ಶಾಸನ ರಾಷ್ಟ್ರಾಧ್ಯಕ್ಷರ ಒಪ್ಪಿಗೆಗೋ ಕೇಂದ್ರ ಸರ್ಕಾರದ ಒಪ್ಪಿಗೆಗೋ ಇಲ್ಲವೆ ರಾಜ್ಯಪಾಲರ ಒಪ್ಪಿಗೆಗೆ

ಹೊಕಗಿದೆ ಎನ್ನುವುದು. ಆದರೆ ಮುಖ್ಯ ಮಂತ್ರಿಗಳ ಒಪ್ಪಿಗೆಗೆ ಹೋಗಿದೆ ಎಂದು ಒಬ್ಬ ಮಂತ್ರಿ ಉತ್ತರ ಕೊಡುವುದಾದರೆ ಇದಕ್ಕೆ ಜವಾಬ್ದಾರರು ಯಾರು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿನ್ನೆ ತಾವು ಉತ್ತರದ ಎರಡನೇ ಪುಟವನ್ನು ನೋಡಿಲ್ಲ. ನೀನೇ ಪುಟ ತಾವು ನೋಡಿದ್ದರೆ ಅಲ್ಲೇ ತಮಗೆ ಉತ್ತರ ಸಿಗುತ್ತಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ.—ಇಂಗ್ಲೀಷಿನಲ್ಲಿ ಇರುವ ಉತ್ತರ ಸರಿ ಎಂದು ನಿನ್ನೆ ತಾವು ಹೇಳಿದಿರಿ ಕನ್ನಡದಲ್ಲಿ ನಾನು ಉತ್ತರವನ್ನು ಓದಿದ್ದೆ. ಇವತ್ತು ಇಲ್ಲಿ ನೀವು ಈ ಹೇಳಿಕೆಯನ್ನು ಇಂಗ್ಲೀಷ್ ಭಾಷೆಯಲ್ಲಿ ಓದಿಸಿದ್ದೀರಿ. ಕನ್ನಡದ ಪ್ರತಿಯನ್ನೂ ನನಗೆ ಒಂದು ಓದಗಿಸಿಕೊಡಿ ಇದು ಯಾವುದೋ ಅದು ಸರಿಯೋ ನೋಡೋಣ. ನಿನ್ನೆ ಇಂಗ್ಲೀಷಿನ ಪ್ರತಿಯಲ್ಲಿ ಉತ್ತರ ಸರಿಯಿತ್ತು. ಇವತ್ತು ಕನ್ನಡದಲ್ಲಿನ ಪ್ರತಿಯ ಉತ್ತರ ಸರಿಯಿದೆಯೋ ಏನೋ ನೋಡೋಣ. ಇವತ್ತು ತಾವು ಓದಿಸಿರುವ ಇಂಗ್ಲೀಷ್ ಪ್ರತಿಯಲ್ಲಿನ ಉತ್ತರವೇ ಸರಿ ಎಂದರೆ ನಾನು ಇದನ್ನು ಒಪ್ಪುತ್ತೇನೆ. ಇವತ್ತು ಬಾವಿಯನ್ನು ತೆಗೆಸುವ ಜವಾಬ್ದಾರಿ ಯಾರದ್ದು ? ಕಂದಾಯ ಇಲಾಖೆಯವರು ಬಾವಿ ತೆಗೆಸುವುದಕ್ಕೆ ಆಗುವುದಿಲ್ಲ. ಇದನ್ನು ತಾವು ಜಿಲ್ಲಾಧಿಕಾರಿಗಳಿಗೆ ವಹಿಸಿದ್ದೀರೋ ಅಥವಾ ಜಿಲ್ಲಾಪರಿಷತ್ತುಗಳಿಗೆ ವಹಿಸಿದ್ದೀರೋ ? ಜಿಲ್ಲಾ ಪರಿಷತ್ತಿನಿಂದ ದಿನಾ ಒಂದೊಂದು ಅಧಿಕಾರವನ್ನು ತಾವು ಕಿತ್ತು ಕೊಳ್ಳುತ್ತಿದ್ದೀರಿ. ಇದನ್ನೂ ಕಿತ್ತುಕೊಂಡಿದ್ದರೆ, ಸರ್ಕಾರ ಮತ್ತು ಜಿಲ್ಲಾಪರಿಷತ್ತಿನ ಜಗಳದಲ್ಲಿ ಜನರಿಗೆ ನರಕ ಆಗುವುದು ಬೇಡ. ಆದಕಾರಣ ಈ ಜವಾಬ್ದಾರಿ ಯಾರದ್ದು ಎಂದು ದಯಮಾಡಿ ನನಗೆ ಸ್ಪಷ್ಟೀಕರಣ ಕೊಡಬೇಕು. ಮಂತ್ರಿ ಈ ಒಂದು ಆಡಳಿತದ ದ್ವಂದ್ವ ರೋಗವನ್ನು ಈ ಬರಪರಿಹಾರ ಕಾಮಗಾರಿಗೆ ಅಂಟಿಸಬಾರದೆಂದು ನಾನು ಸರ್ಕಾರದಿಂದ ಆಶ್ವಾಸನೆಯನ್ನು ಬಯಸುತ್ತೇನೆ, ತಕ್ಷಣ ಒಂದು ವಿಜಿಲೆನ್ಸ್ ಸೆಲ್ ಮಾಡಿ. ಎಲ್ಲೆಲ್ಲಿ ಕಾಮಗಾರಿಗಳು ನಡೆಯುತ್ತಿವೆ ಅವು ಯಾವ ರೀತಿ ನಡೆಯುತ್ತಿವೆ, ಯಾರು ನಡೆಸುತ್ತಿದ್ದಾರೆ, ಜಿಲ್ಲಾಪರಿಷತ್ತಿನವರು ನಡೆಸುತ್ತಿದ್ದಾರೋ ಅಥವಾ ಜಿಲ್ಲಾಧಿಕಾರಿಗಳು ನಡೆಸುತ್ತಿದ್ದಾರೋ ಎನ್ನುವ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಇದನ್ನು ಸರಿ ಮಾಡಬೇಕು. ಈಗ ವಿದ್ಯುತ್ ಅಭಾವ ಏನು ಇದೆ, ಇದನ್ನು ಪರಿಹರಿಸುವುದಕ್ಕೆ ಮಾಡುವುದಕ್ಕೆ ಸರ್ಕಾರ ಒಂದು ನಿರ್ಧಾರ ಮಾಡಬೇಕು. ಇದಕ್ಕೆ ಒಂದು ಪೋಲಿಟಿಕಲ್ ವಿಲ್ ಬೇಕು. ಇದರ ಬಗ್ಗೆ ಇಲ್ಲಿ ಬರೀ ಭಾಷಣ ಮಾಡಿ ಚರ್ಚೆ ಮಾಡಿ ಹೋಗುವುದು ಅಲ್ಲ. ಇದನ್ನು ನಾವು ಮಾಡುತ್ತೇವೆ ಎನ್ನುವ ವಿಶ್ವಾಸ ನಿಮ್ಮಲ್ಲಿ ಬರಬೇಕು. ಮುಂದೆ ನಿಮ್ಮ ಖಾತೆಗೆ ಮಂತ್ರಿ ಮಂಡಲದ ವಿಸ್ತರಣೆ ಸಮಯದಲ್ಲಿ ಯಾರು ಬರುತ್ತಾರೋ ಗೊತ್ತಿಲ್ಲ. ನೀವು ಇರುವವರೆಗೆ ಆದರೂ ಈ ಎಲ್ಲಾ ಕೆಲಸಗಳನ್ನು ತಾವು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ಅಧ್ಯಕ್ಷರೇ, ಬರ ಪರಿಸ್ಥಿತಿ ಬಗ್ಗೆ ಅನೇಕ ಸಾರಿ ಚರ್ಚೆಗಳು ನಡೆದಿವೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡಾ ಭಾಷಣ ಮಾಡಿ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ಇದು ನಮ್ಮ ರಾಜ್ಯದ ದುರಾದೃಷ್ಟವೋ ಅಥವಾ ನಮ್ಮ ನೈಸರ್ಗಿಕ ಅಸಮತೋಲನವೋ ಗೊತ್ತಿಲ್ಲ. ಹೀಗೆ ಪ್ರತಿ ವರ್ಷ ಕೂಡಾ ಒಂದಲ್ಲ ಒಂದು ಕಡೆ ಬರಗಾಲ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗಿದೆ. ಈ ವರ್ಷ ಬಹಳ ಭಾಗಗಳಿಗೆ ಅಭಾವ ಬಂದಿದ್ದರೆ ಕಳೆದ ನಾಲ್ಕಾರು ವರ್ಷಗಳಲ್ಲೂ ಕೂಡ ಅನೇಕ ಭಾಗಗಳಲ್ಲಿ ಅಭಾವ ಪರಿಸ್ಥಿತಿ ಬಂದಿದೆ ಇದು ನಮ್ಮ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ, ಇಡೀ ರಾಷ್ಟ್ರದಲ್ಲಿ ಕೂಡ ಉಂಟಾಗಿದೆ. ಸಮತೋಲನದ ಒಂದು ವ್ಯವಸ್ಥೆ ಇಲ್ಲದೇ ರಾಷ್ಟ್ರದಲ್ಲೂ ಕೂಡ ಇದು ಹಬ್ಬಿದೆ. ವ್ಯವಸಾಯವನ್ನು ಮಾಡತಕ್ಕಂತಹ ಮತ್ತು ಇದನ್ನೇ ಅವಲಂಬಿಸಿಕೊಂಡಿರತಕ್ಕಂತಹ ಜನರು ಈ ರಾಷ್ಟ್ರದಲ್ಲಿ ಸುಮಾರು ೭೫ ಪರ್ಸೆಂಟ್ ಇದ್ದಾರೆ. ಆ ಜನರಿಗೆ ಇದರಿಂದ ಬಹಳ ತೊಂದರೆಯಾಗುತ್ತಿದೆ. ನಮ್ಮ ರಾಜ್ಯದ ಸಂಪತ್ತಿಗಾಗಲೀ, ನಮ್ಮ ರಾಷ್ಟ್ರದ ಸಂಪತ್ತಿಗಾಗಲೀ ಏನೂ ಕಡಿಮೆ ಇಲ್ಲ. ನಮ್ಮ ರಾಜ್ಯದಲ್ಲಿ ಜನ ಶಕ್ತಿ ಇವೆ. ನೈಸರ್ಗಿಕ ಸಂಪತ್ತು ಇದೆ; ಪ್ರತಿಯೊಂದು ಸಂಪತ್ತನ್ನೂ ಕೂಡ ನಾವು ಸಮತೋಲನಗಾಗಿ ಉಪಯೋಗಿಸಿ ಈ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಅನುವು ಮಾಡಿಕೊಡಲು ಹಾಗೂ ಈ ಎಲ್ಲಾ ಸಂಪತ್ತನ್ನು ಉಪಯೋಗಿಸಿ ಈ ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ಹಾಗೂ ನಮ್ಮಲ್ಲಿರತಕ್ಕಂತಹ ನೀರನ್ನು ಕೂಡ ಉಪಯೋಗ ಮಾಡಿಕೊಳ್ಳಲು ಸರಿಯಾದುತಹ ವ್ಯವಸ್ಥಿತವಾದಂತಹ ಕೆಲಸವನ್ನು ಮಾಡತಕ್ಕಂತಹ ಯೋಜನೆಗಳು ಕೂಡ ನಮಗೆ ಸಿಕ್ಕಿಲ್ಲ. ಮಾನ್ಯ ಕಂದಾಯ ಮಂತ್ರಿಗಳ ಬಂದು ವರದಿ ಏನು ಇದೆ. ಇದರ ಬಗ್ಗೆ ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ಇದು ಬರೀ ಕಂದಾಯ ಮಂತ್ರಿಗಳಿಗೆ ಸೇರಿರತಕ್ಕಂತಹ ವಿಷಯ ಅಲ್ಲ. ಈ ಅಭಾವ ಪರಿಸ್ಥಿತಿ ಬಗ್ಗೆ ಸಂಪೂರ್ಣ ಚಿತ್ರವನ್ನು ಅಂದರೆ ಯಾವ್ಯಾವ ತಾಲ್ಲೂಕುಗಳಲ್ಲಿ ಯಾವ್ಯಾವ ಜಿಲ್ಲೆಗಳಲ್ಲಿ ಯಾವ್ಯಾವ ಹಳ್ಳಿಗಳಲ್ಲಿ ಈ ಅಭಾವ ಪರಿಸ್ಥಿತಿ ಇದೆ

ವಿಸ್ತೃತಕ್ಕಂತಹ ಚಿತ್ರವನ್ನು ಮಾತ್ರ ಇಲ್ಲಿ ಅಧಿಕಾರಿಗಳ ಮೂಲಕ ತಿಳಿಸಿದ್ದಾರೆ. ಕೆಲವು ಸಾರಿ ಈ ವಿಚಾರವನ್ನು ತಿಳಿಸಿದಂತಹ ವಿಜಿನ್ಸಿಗಳು ಏನಿವೆ ಅದರಲ್ಲೂ ಅಭಾವ ಪರಿಸ್ಥಿತಿ ಬಗ್ಗೆ ಶಾಸಕರು, ಪ್ರತಿನಿಧಿಗಳು ಕಳಿಸಿದಂತಹ ವರದಿಗಳ ಬಗ್ಗೆ ಅಧಿಕಾರಿಗಳು ಅಷ್ಟಾಗಿ ಹೆಚ್ಚು ಗಮನ ಕೊಡಲೇ ಇಲ್ಲ. ಸೆಟ್‌ಲೈಟ್‌ನಿಂದ ಬಂದಂತಹ ವರದಿಗಳನ್ನು ಪ್ರಮುಖವಾಗಿಟ್ಟುಕೊಂಡು ಆದರ ಆಧಾರದ ಮೇಲೆ ಕೆಲವು ಭಾಗಗಳಲ್ಲಿ ಬಹಳ ಅಭಾವವಿದೆ ಎಂದು ವರದಿ ಕೊಡುತ್ತಾರೆ. ಹೀಗೆ ಸಂಪೂರ್ಣವಾದ ತಪ್ಪು ವರದಿಯನ್ನು ಕೊಟ್ಟು ಈ ರಾಜ್ಯದ ಆಡಳಿತ ನಡೆಸತಕ್ಕಂತಹವರಿಗೆ ಪ್ರತಿನಿಧಿಗಳಿಗೆ ಯಾವ ವಸ್ತುಸ್ಥಿತಿಯೂ ಇಲ್ಲದಂತಹ ಪರಿಸ್ಥಿತಿಯನ್ನು ತಂದಿಟ್ಟಿದ್ದಾರೆ. ಈ ಸರ್ಕಾರಕ್ಕೆ ತಿಳಿಸತಕ್ಕಂತಹ ಅಂಕಿ ಅಂಶಗಳನ್ನು ಸಮಯಕ್ಕೆ ಸರಿಯಾಗಿ ಸರಿಯಾದ ಕಾಲದಲ್ಲಿ ಮತ್ತು ನಿರ್ದಿಷ್ಟವಾದ ಚಿತ್ರವನ್ನು ಅವರು ಇಲ್ಲಿ ಕೊಡಲೇ ಇಲ್ಲ. ಈಗಲೂ ಕೂಡ ಪರಿಸ್ಥಿತಿ ಎಷ್ಟು ಬಿಗಡಾಯಿಸಿದೆ ಎಂದು ಹೇಳಿದರೆ ಈ ರಾಜ್ಯದಲ್ಲಿ ಕೆಲಸಕ್ಕೋಸ್ಕರ, ಆಹಾರಕ್ಕೋಸ್ಕರ, ಮೇವಿಗೋಸ್ಕರ ಜನ ಬೇರೆ ಕಡೆಗಳಿಗೆ ಇನ್ನೂ ವಲಸೆ ಹೋಗುತ್ತಿದ್ದಾರೆ. ಮೊನ್ನೆ ೨೨ ಹದ ಮಳೆ ಬಂದ ಮೇಲೆ ಕೆಲವು ಕಡೆ ಬೆಳೆಯಾಗಿದೆ ಎಂದು ಸಮೀಕ್ಷೆ ಮಾಡಿದ್ದಾರೆ. ಆ ಸಮೀಕ್ಷೆಯನ್ನು ಸರಕಾರ ತರಿಸಿಕೊಂಡು ನೋಡಿದರೆ, ಅದು ಸಹ ತಪ್ಪು ಎಂದು ಗೊತ್ತಾಗುತ್ತದೆ. ಅಲ್ಲಿ ಏನಾಗಿದೆ ಎಂದು ಹೇಳಿದರೆ, ಬೀಜವನ್ನು ಹಾಕಿದಾಗ ಬೀಜ ಒಡೆದು ಮೊಳಕೆ ಬಂದ ಮೇಲೆ ಅದು ಒಂದು ಹಂತಕ್ಕೆ ಬಂದ ಮೇಲೆ ಬೇಸಾಯವನ್ನು ಮಾಡತಕ್ಕಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುವುದಕ್ಕೆ ಅವಕಾಶವೇ ಆಗಲಿಲ್ಲ. ಬೀಜ ಬಿತ್ತಿದ ಮೇಲೆ ಸಕಾಲದಲ್ಲಿ ಮಳೆ ಬರಬೇಕಾಗುತ್ತದೆ. ಮಳೆ ಬಾರದಿದ್ದರೆ ಆ ಬೆಳೆ ನಾಶವಾಗುತ್ತದೆ. ಈಗ ಮಳೆ ಬಂದರೂ ಕೂಡ ಭೂಮಿಯಲ್ಲಿ ಬೆಳೆಯನ್ನು ಸರಿಯಾಗಿ ಬೆಳೆಯಲು ಆಗುವುದಿಲ್ಲ. ಸಕಾಲದಲ್ಲಿ ಮಳೆ ಬರಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿರುವಾಗ ಮಳೆಯಾಗಿದ್ದರೂ ಕೂಡ ಬೆಳೆಯಾಗಿರತಕ್ಕಂಥಾದ್ದು ಕಾಲು ಭಾಗ ಮಾತ್ರ. ನಮ್ಮ ಜಿಲ್ಲಾಧಿಕಾರಿಗಳ ವರದಿ ತಯಾರಾಗುತ್ತಿದೆ. ೧೯೫ ತಾಲ್ಲೂಕುಗಳು ಅಥವಾ ೧೫ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಮಳೆಯಾಗಿದೆ ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ೧೫ ಜಿಲ್ಲೆಗಳಲ್ಲಿ ಏನು ಆಗಿದೆ, ಆ ಜಿಲ್ಲೆಗಳಲ್ಲಿ ಕೂಡ ಕೆಲಸಗಳು ಸರಿಯಾಗಿ ವ್ಯವಸ್ಥಿತವಾಗಿರುವುದಕ್ಕೆ ಅವಕಾಶವಾಗಲೇ ಇಲ್ಲ. ಏಕೆಂದರೆ ಸರಿಯಾದ ಮಾಹಿತಿಯನ್ನು ಸರಕಾರಕ್ಕೆ ಕೊಟ್ಟಿಲ್ಲ. ಆ ಮಾಹಿತಿಯನ್ನು ಕೊಡುವಲ್ಲಿ ಸಹ ವಿಳಂಬ ಆಯಿತು.

ವಿಳಂಬವಾದ ಪ್ರಯುಕ್ತ ಹಣ ಕೊಡುವುದಕ್ಕೆ ಸಹ ಸಾಧ್ಯವಾಗಿಲ್ಲ. ಹಿಂದಿನ ಸರ್ಕಾರದ ರೀತಿನೂ ಮಂತ್ರಿಗಳು ಎಲ್ಲ ಕಡೆ ಹೋಗಿ ಪ್ರವಾಸ ಮಾಡಲಿಲ್ಲ. ಇದು ಏನಾಗಿದೆ ಅಂದರೆ ಕಾಮಗಾರಿ ವಿಚಾರಗಳಲ್ಲಿ ನಾವು ರಾಜಕೀಯ ಮಾಡತಕ್ಕದ್ದಲ್ಲ, ಈ ರಾಜ್ಯದ ಎಲ್ಲ ಪ್ರತಿನಿಧಿಗಳಿಗೂ ಈ ರಾಜ್ಯದ ಜನತೆಯ ಮೇಲೆ ಆಸಕ್ತಿಯಿದೆ. ಆಹಾರ ಮತ್ತು ಈ ಅಭಾವ ಪರಿಸ್ಥಿತಿ ಬಗ್ಗೆ ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದನ್ನು ಮಾಡಬೇಕೆನ್ನುವ ಕಳಕಳಿಯಿದೆ. ಇದನ್ನು ವಿಚಾರ ಮಾಡಿ ಕಾಮಗಾರಿ ಕೆಲಸಗಳ ಬಗ್ಗೆ ಯೋಜನೆ ಹಾಕತಕ್ಕ ಜನರು ಇದ್ದಾರೆ. ಜಿಲ್ಲಾಮಟ್ಟದಲ್ಲಿ ಪ್ಲಾನಿಂಗ್ ಮಾಡತಕ್ಕ ಇಲಾಖೆ ಇದೆ, ಮತ್ತೆ ಅಲ್ಲಿ ಇಂಜಿನಿಯರುಗಳು ಇದಾರೆ. ವ್ಯವಸಾಯ ಇಲಾಖೆಯವರು ಇದ್ದಾರೆ. ಜಿಲ್ಲಾಧಿಕಾರಿಗಳು ಅವರ ಮೇಲಿದ್ದಾರೆ. ಅಧಿಕಾರ ವಿಕೇಂದ್ರೀಕರಣ ಮಾಡಿರುವುದರಿಂದ ಜಿಲ್ಲಾ ಪರಿಷತ್ ಕೆಲಸ ಮಾಡುತ್ತಿಲ್ಲ ಜಿಲ್ಲಾಪರಿಷತ್‌ನವರು ಈ ಅಭಾವ ಪರಿಸ್ಥಿತಿಯ ಬಗ್ಗೆ ಯಾವ ಕಡೆಗೂ ಕೂಡ ಇಂದು ಕಾಸಿನ ಕೆಲಸ ಮಾಡಿಲ್ಲ. ನಾನ್ಯ ಚಂದ್ರೆಗೌಡರು ಹೇಳುತ್ತಿದ್ದರು ಜಿಲ್ಲಾಪರಿಷತ್‌ನವರಿಗೆ ಕೆಲಸ ಹಂಚಿದ್ದರೆ ಅವರು ಮಾಡುತ್ತಿದ್ದರೆಂದು ಹೇಳುತ್ತಿದ್ದರು. ಆದರೆ ಏನಾಗಿದೆ ಅಂದರೆ ಅವರಿಗೆ ಇರತಕ್ಕ ಕಾರ್ಯಕ್ರಮಗಳು ಏನಿವೆ ಅವುಗಳಲ್ಲಿ ಅಭಾವ ಪರಿಸ್ಥಿತಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ಕೆಲಸ ಮಾಡುವ ವ್ಯವಸ್ಥೆ ಇಲ್ಲ, ಸಣ್ಣ ನೀರಾವರಿ ಯೋಜನೆ ಕೆಲಸ ಮಾಡಬೇಕಾದರೆ ಅವರಲ್ಲಿ ಹಣ ಇರುವುದಿಲ್ಲ. ರಸ್ತೆ ಮಾಡಬೇಕಾದರೆ ಹಣವಿಲ್ಲ. ಹೀಗೆ ನಾನಾ ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರುವುದರಿಂದ, ಜೊತೆಗೆ ಸಮರ್ಪಕವಾಗಿ ಕೆಲಸ ಮಾಡದೇ ಇರತಕ್ಕ ದುರಾಪರೆಯೋಗವಾಗಿರತಕ್ಕ ನಿದರ್ಶನಗಳನ್ನು ಈ ಸಭೆಗೆ ಅನೇಕ ಸಾರಿ ನಾವು ತೋರಿಸಿದ್ದೇವೆ. ಆಂತಹ ಜಿಲ್ಲಾಪರಿಷತ್‌ನ ಆಡಳಿತ ವೈಖರಿಯನ್ನು ಇಟ್ಟುಕೊಂಡು ಬರಗಾಲವನ್ನು ನಾವು ಎದುರಿಸುತ್ತೇವೆಂದರೆ ಆಗುವುದಿಲ್ಲ. ನಮ್ಮ ಸರ್ಕಾರ ಈ ಬಗ್ಗೆ ಸೂಕ್ತವಾದ ಹಾಗೂ ಭದ್ರವಾದ ಬುನಾದಿಯನ್ನು ಹಾಕದಿದ್ದರೆ ಬಹಳ ಕಷ್ಟವಾಗುತ್ತದೆ. ಈಗ ನಮಗೆ ಮಳೆ ಬಂದಿದೆಯೆಂದು ಕಾಮಗಾರಿ ಕೆಲಸ ಕಾರ್ಯಗಳಿಗೆ ಇನ್ನೂ ಹಣವನ್ನು ಕೂಡ ಒದಗಿಸಿಲ್ಲ. ಅಭಾವ ಪೀಡಿತ ಪ್ರದೇಶಗಳಲ್ಲಿ ಕಾಮಗಾರಿ ಕೆಲಸಗಳನ್ನು ಮಾಡಬೇಕೆಂದು ಜಿಲ್ಲಾಧಿಕಾರಿಗಳು ಕವಿಂಟಿಗಳನ್ನು ಸೇರಿಸಿದ್ದರು. ಜಿಲ್ಲಾಧಿಕಾರಿಗಳು ಸೇರಿಸಿದಂತಹ ಮೀಟಿಂಗ್‌ನಲ್ಲಿ ಜನ ಪ್ರತಿನಿಧಿಗಳಾದ ನಾವುಗಳು ನಮ್ಮ ನಮ್ಮ ಜಿಲ್ಲೆಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಕೆಲಸಗಳು ಆಗಬೇಕೆಂದು ಸೂಚಿಸಲಾಗಿತ್ತು. ಕೆಲಸಗಳನ್ನು ಮಾಡಿರತಕ್ಕವರು ನಮಗೆ ಹಣ ಕೊಡುವುದನ್ನು ನಿಲ್ಲಿಸಿದ್ದಾರೆಂದು ಟೆಲಿಗ್ರಾಮ್‌ಗಳನ್ನು ಕಳುಹಿಸುತ್ತಿದ್ದಾರೆ. ಜೊತೆಗೆ ಕಾಮಗಾರಿ ಕೆಲಸ

ಕಾರ್ಯಗಳನ್ನು ನಿಲ್ಲಿಸಬೇಕೆಂದು ಹೇಳಿದ್ದಾರೆನ್ನುವ ಮಾತು ಸಹ ಕೇಳಿ ಬಂದಿದೆ. ರವಿನ್ಯೂಕ್ಲಿಯರ್ ಇಲ್ಲಿದ್ದಾರೆ. ಈ ಬಗ್ಗೆ ಸರಿಯಾದ ಪೂರ್ಣತಿಯನ್ನು ಅವರು ತೆಗೆದುಕೊಂಡು ಈ ಅಭಾವ ಪರಿಸ್ಥಿತಿಯ ಬಗ್ಗೆ ಯಾವ ಕೆಲಸವೂ ವಿಳಂಬವಾಗದ ರೀತಿಯಲ್ಲಿ ಕೆಲಸ ನಡೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ಕೆಲಸವನ್ನು ತಾವು ವ್ಯವಸ್ಥಿತವಾಗಿ ಮಾಡಬೇಕಾದರೆ ಎಜೆನ್ಸಿ ಫಿಕ್ಸ್ ಮಾಡುವಾಗ ಸರಿಯಾದ ರೀತಿಯಲ್ಲಿ ಕೆಲಸ ಮಾಡುವ ಎಜೆನ್ಸಿಗಳನ್ನು ಜಿಲ್ಲಾವಾರು ಪಟ್ಟಿದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಫಿಕ್ಸ್ ಮಾಡಿ, ಆ ಎಜೆನ್ಸಿ ನಿಯಮಿತ ಕಾಲದಲ್ಲಿ ಕೆಲಸ ಮಾಡಬೇಕೆಂದು ಆದೇಶವನ್ನು ತಾವು ಕೊಡಬೇಕಾಗುತ್ತದೆ. ಇದು ನಮ್ಮ ಶಾರ್ಟ್‌ಡ್ಯೂರೇಷನ್ ಮೆಜರ್. ಈ ನಾಲ್ಕೈದು ತಿಂಗಳುಗಳಲ್ಲಿ ಅಭಾವ ಪರಿಸ್ಥಿತಿಯನ್ನು ನೀವು ಉತ್ತಮ ಪಡಿಸಬೇಕು ನಾವು ಪ್ರತಿವರ್ಷವೂ ಅಭಾವ ಪರಿಸ್ಥಿತಿಯ ಕಾಮಗಾರಿ ಕೆಲಸಗಳನ್ನು ಮಾಡುತ್ತಿರುತ್ತೇವೆ. ಮತ್ತೆ ಪುನಃ ಅಭಾವ ಪರಿಸ್ಥಿತಿ ಕೆಲಸ ಬರುತ್ತದೆ. ಇದರ ಬಗ್ಗೆ ಒಂದು ಖಾಯಂ ಆಗಿ ಏನಾದರೂ ಒಂದು ಕಾರ್ಯಕ್ರಮವನ್ನು ನಿರ್ದಿಷ್ಟವಾಗಿ ರೂಪಿಸುವುದಕ್ಕೆ ಇಂಜಿನಿಯರಿಗೆ ಇಲಾಖೆಯವರಾಗಲೀ, ತಜ್ಞರಾಗಲೀ ಯೋಜನ ಇಲಾಖೆಯವರಾಗಲಿ ಕ್ರಮ ತೆಗೆದುಕೊಂಡಿಲ್ಲ. ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಒಂದು ಖಾಯಂ ಆದ ಕೆಲಸ ಈ ಬಗ್ಗೆ ನಡೆಯುತ್ತಿಲ್ಲ. ಈಗ ಮಾನ್ಯ ಚಂದ್ರೇಗೌಡರು ಹೇಳಿದಂತೆ, ಈಗ ಏನಾಗಿದೆ ಅಂದರೆ ನಿಮ್ಮ ರೆವಿನ್ಯೂ ಕೋಡ್ ಬ್ರಿಟಿಷರ ಕಾಲದಲ್ಲಿದ್ದ ಕೋಡ್, ಆಣೆವಾರಿ ಅಥವಾ ಅರ್ಧ ಕಾಸು ಅರ್ಧ ರೂಪಾಯಿ ಬೆಳೆಯೆಂದು ಬರೆಯತಕ್ಕದ್ದು ಈಗಲೂ ರೂಢಿಯಾಗಿದೆ. ಅದನ್ನು ಚಾವಡಿಯಲ್ಲೂದರೂ ಬರೆಯಬಹುದು, ಅಥವಾ ಬೇರೆ ಎಲ್ಲಿಯಾದರೂ ಬರೆಯಬಹುದು. ಆ ರೀತಿ ಬರೆದಂಥ ಆಧಾರದಿಂದ, ಈ ಪರಿಪೂರ್ಣತೆ ಇಲ್ಲದೇ ಇರುವ ಮಾಹಿತಿಯನ್ನು ಸಂಗ್ರಹಣೆ ಮಾಡಿ ನೀವು ಯಾವ ಕಾರ್ಯಕ್ರಮವನ್ನು ರೂಪಿಸುವುದಕ್ಕೆ ಸಾಧ್ಯ ಎನ್ನತಕ್ಕದ್ದನ್ನೇ ತಾವು ತಿಳಿಸಬೇಕಾಗಿದೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ ನಮ್ಮ ಮನೋಭಾವನೆ ಮತ್ತು ಆಡಳಿತದ ಬದಲಾವಣೆಗಳು ಆಗಬೇಕು. ಮೂಲಭೂತವಾದ ಬದಲಾವಣೆಗಳು ಆಗಬೇಕು. ಈಗ ಅಭಾವ ಪರಿಸ್ಥಿತಿಗೆ ಪರ್ಮನೆಂಟ್ ಮೆಶರ್ಸ್ ಎಂದು ಹೇಳಿದರೆ ಈ ರಾಜ್ಯದಲ್ಲಿರತಕ್ಕಂಥ ಸಂಪತ್ತನ್ನು ಸರಿಯಾದ ರೀತಿಯಲ್ಲಿ ಅದನ್ನು ವಿನಿಯೋಗ ಮಾಡತಕ್ಕಂಥ ಅದನ್ನು ನೀವು ಜನರ ಮತ್ತು ಜನ ಶಕ್ತಿ ಉಳ್ಳಂಥ ಈ ರಾಜ್ಯದ ಪ್ರತಿಯೊಬ್ಬ ಜನರಿಗೆ ಉದ್ಯೋಗ ವ್ಯವಸಾಯ ಪಂತ್ತು ವ್ಯವಸಾಯದ ಬೆಳೆಗಳನ್ನು ಬೆಳೆಯತಕ್ಕಂಥ ಆಸರೆಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಈ ವ್ಯವಸ್ಥೆಯನ್ನು ಸರ್ಕಾರ ಮಾಡದೇಹೋದರೆ, ನಮ್ಮ ನೈಸರ್ಗಿಕ ಸಂಪತ್ತು ನಾಶವಾಗುತ್ತದೆ ಮತ್ತು ನಮ್ಮ ಮಾನವ ಶಕ್ತಿ ಕೂಡ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಿರುದ್ಯೋಗ ಸಮಸ್ಯೆಗಳು ಬೆಳೆಯುತ್ತದೆ, ಹಾಹಾಕಾರ ಬೆಳೆಯುತ್ತದೆ ಮತ್ತು ಅಭಾವ ಬರುತ್ತದೆ. ನೀರಿನ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಉಪಯೋಗ ಮಾಡಲಿಕ್ಕೆ ನಮ್ಮ ತಜ್ಞರು ಯಾವ ಕೆಲಸವನ್ನೂ ಹಾಗೂ ಯೋಜನೆಯನ್ನು ಕೂಡ ಹಾಕಿಲ್ಲ. ಈಗ ಅಭಾವ ಪರಿಸ್ಥಿತಿಯಲ್ಲಿ ಬೆಳೆಗಳನ್ನು ಮಾಡಲು ಭೂಮಿಯಲ್ಲಿರತಕ್ಕ ನೀರನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಭೂಮಿಯಲ್ಲಿರತಕ್ಕಂಥ ನೀರನ್ನು ಉಪಯೋಗಿಸತಕ್ಕಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಅದನ್ನು ಉಪಯೋಗಿಸಿ ನಾವು ಅಭಾವ ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಹೇಳಿದರೆ, ಆ ವ್ಯವಸ್ಥೆಗೆ ಯಾವ ಒಂದು ನಿರ್ದಿಷ್ಟವಾದಂಥ ಕಾರ್ಯಕ್ರಮವನ್ನು ಮಾಡತಕ್ಕಂಥ ಒಂದು ಸಂಘಟನೆ ನಿಮ್ಮಲ್ಲಿ ಇಲ್ಲ. ಅದಕ್ಕೆ ವಿದ್ಯುಚ್ಛಕ್ತಿ ಬೇಕು. ಮಿದ್ಯುಚ್ಚಕ್ತಿಯ ಜೊತೆಗೆ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸತಕ್ಕಂಥ ವ್ಯವಸ್ಥೆಯೂ ಆಗಬೇಕು. ಈ ಕಡೆಗೆ ವಿದ್ಯುಚ್ಛಕ್ತಿ ಸಿಗುತ್ತಿಲ್ಲ. ಈ ಕಡೆಗೆ ಬೋರ್‌ವೆಲ್ ಹಾಕಿಸಿ ನೀರನ್ನು ತರಿಸಬೇಕು ಎಂದರೆ ಎಲ್ಲಾ ಜಿಲ್ಲೆಗಳಲ್ಲಿಯೂ ಬೋರ್‌ವೆಲ್‌ಗಳನ್ನು ಹಾಕಿರತಕ್ಕಂಥ ವ್ಯವಸ್ಥೆಯನ್ನು ತಾವು ನೋಡಿದಿರೆ, ಜಿಲ್ಲಾ ಪರಿಷತ್ತಿನಲ್ಲಿ ದುರುಪಯೋಗವಾಗಿದೆ. ಅಲ್ಲಿ ಕೆಲಸಗಳಿಂ ಯಾವುದೂ ಸರಿಯಾಗಿ ನಡೆಯುತ್ತಿಲ್ಲ. ನೀರನ್ನು ಉಪಯೋಗಿಸತಕ್ಕ ಪರಿಸ್ಥಿತಿ ಇಲ್ಲ ಈ ರೀತಿ ನಾವು ಕೆಲಸ ಮಾಡುತ್ತಿದ್ದರೆ ಈ ಭೂಮಿಯಲ್ಲಿರತಕ್ಕ ನೀರನ್ನು ಜನರಿಗೆ ಉಪಯೋಗ ಮಾಡಲಿಕ್ಕೆ ಏನೆಲ್ಲ ಅವಕಾಶ ಇದೆಯೆಂದು ನಾವು ಸರಿಯಾದ ರೀತಿಯಲ್ಲಿ ಯೋಚನೆ ಮಾಡಬೇಕಾಗಿದೆ. ಈಗ ನಮ್ಮ ನೀರಿನ ವ್ಯವಸ್ಥೆಯನ್ನು ಹೇಗೆ ಮಾಡಬಹುದು. ಈಗ ನಮಗೆ ನದಿ ಮೂಲಗಳಿವೆ. ಈ ನೀರಿಗೋಸ್ಕರ ನಾವು ರಾಜ್ಯ. ರಾಷ್ಟ್ರ. ಕೋರ್ಟು ಕಚೇರಿಗಳನ್ನು ಸುತ್ತಿ ನಾವು ಸುಮಾರು ೫೦ ವರ್ಷಗಳಿಂದ ಈ ನೀರಿನ ವ್ಯಾಜ್ಯವನ್ನು ತೀರ್ಮಾನ ಮಾಡದೆ ಕುಳಿತಿದ್ದೇವೆ. ಈ ಜಲಸಂಪತ್ತು ಈ ರಾಷ್ಟ್ರಕ್ಕೋಸ್ಕರ ಸೇರಿರತಕ್ಕದ್ದು. ಈ ಜಲಸಂಪತ್ತನ್ನು ಉಪಯೋಗಿಸಿಕೊಳ್ಳತಕ್ಕಂಥ ಕಾರ್ಯಕ್ರಮವನ್ನು ಕೇಂದ್ರ ಸರಕಾರದವರೂ ಮಾಡಿಲ್ಲ. ರಾಜ್ಯ ಸರ್ಕಾರದಲ್ಲಿರತಕ್ಕಂಥ ಅಧಿಕಾರವನ್ನು ಆದರೂ ಕೂಡ ನೀವು ಚಲಾಯಿಸಿ ಈ ಕೆಲಸವನ್ನು ಮಾಡಿ ಇಲ್ಲಿರತಕ್ಕಂಥ ನೀರಿನ ವ್ಯವಸ್ಥೆ ಮಾಡಲಿಕ್ಕೆ ಅವಕಾಶ ಆಗಿಲ್ಲ. ಏಕೆ ಎಂದು ಹೇಳಿದರೆ ಈಗ ನಮ್ಮ ದೇಶದ ಎಂಟನೇ ಒಂದು ಭಾಗದಲ್ಲಿ ನಮ್ಮ ಭೂಮಿಯಲ್ಲಿ. ಈ ದೇಶದಲ್ಲಿ ಅಭಾವ ಪರಿಸ್ಥಿತಿ ಸದಾ ಇದ್ದೇ ಇರುತ್ತದೆ. ಇವರ

ಜೊತೆಗೆ—Less than only 1/3 of the arable lands are irrigated. Not even half the lands are irrigated in the country and in the meanwhile the permanent measures to be adopted, enumerated, discussed and those deliberations and discussions were not implemented. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ.. National Drought Commission has been constituted either in the Centre or in the State. There is no permanent commission at all in the State to fight this, to create a revolving fund, even to tame the rivers running within our territory where we can tame this western peninsila river into a water mobilisation to the state to fight this drought.

ಈ ಮಾತಂ ಏಕೆ ಹೇಳುತ್ತಿದ್ದೇನೆಂದರೆ, ಇದರಲ್ಲಿ ೭ ಸಾವಿರ ಟಿ.ಎಂ.ಸಿ.ಎಫ್.ಟಿ. ನೀರನ್ನು ಆಗಸ್ಟ್, ಸೆಪ್ಟೆಂಬರ್‌ನಲ್ಲಿ ನಮ್ಮ ರಾಜ್ಯದಲ್ಲಿ ಹೋಗತಕ್ಕ ನೀರು ಸಮಂದ್ರದ ಪಾಲಾಗುತ್ತಿದೆ. ಇದನ್ನು ನಾವು ಉಪಯೋಗಿಸುವುದಕ್ಕೆ ಏನಾದರೂ ಪ್ರಯತ್ನ ಮಾಡತಕ್ಕ ಇಂಜಿನಿಯರಿಂಗ್ ಇನ್‌ವೆಸ್ಟಿಗೇಷನ್ ತಜ್ಞರಾದ ಇಂಜಿನಿಯರ್‌ಗಳು, ಇನ್‌ವೆಸ್ಟಿಗೇಷನ್ ಮಾಡಲು ನೀವು ರಾಜ್ಯಮಟ್ಟದಲ್ಲಿ ಇಲ್ಲಿ ಒಂದು ಖಾಯಂ ಸ್ಟೇಟ್ ಡ್ರಾಟ್ ಕಮೀಷನ್ ಮಾಡಿ, ಈ ಡ್ರಾಟ್ ಕಮೀಷನ್‌ಗೆ revolving ಫಂಡ್ ಮಾಡಬೇಕಾದರೂ ಏನಾದರೂ ವ್ಯವಸ್ಥೆ ಮಾಡಬೇಕು ನಮ್ಮ ರಾಜ್ಯದಲ್ಲಿ ಸದಾ ಅಭಾವ ಪರಿಸ್ಥಿತಿ ಇರುತ್ತದೆ. ಈ ಭಾಗ ಇಲ್ಲದಿದ್ದರೆ, ನಿಮ್ಮ ಭಾಗ ಇರುತ್ತದೆ ನಿಮ್ಮ ಭಾಗ ಇಲ್ಲದಿದ್ದರೆ ಹೈದರಾಬಾದ್ ಭಾಗ ಇರುತ್ತದೆ. ಹೈದರಾಬಾದ್ ಭಾಗ ಇಲ್ಲದಿದ್ದರೆ ಬಾಂಬೆ ಕರ್ನಾಟಕದ ಭಾಗ ಇರುತ್ತದೆ. ಅಲ್ಲಿ ಇಲ್ಲದಿದ್ದರೆ ಹಳೆಯ ಮೈಸೂರು ಭಾಗದಲ್ಲಿ ಇರುತ್ತದೆ. ಈ ಎಲ್ಲಾ ಭಾಗವನ್ನೂ ಸಮತೋಲನ ಮಾಡತಕ್ಕಂಥ ನೀರಿನ ವ್ಯವಸ್ಥೆ ಮಾಡದೇ ಹೋದರೆ, ಅಭಾವ ಪರಿಸ್ಥಿತಿಯನ್ನು ಬಗೆಹರಿಸುವುದು ಹೇಗೆ ? ಭೂಮಿಯಲ್ಲಿ ನೀರು ಇಲ್ಲದಿದ್ದರೆ, ನದಿಯ ನೀರನ್ನು ನೀವು ಬಳಸದೇ ಹೋದರೆ, we have to depend on the monsoon, we are always gambling with the monsoon. ಈ ರೀತಿ ಉದ್ಭವವಾಗತಕ್ಕ ಸಮಸ್ಯೆಗಳ ಮೂಲಕ ರಾಜ್ಯದಲ್ಲಿ ಅನ್ಯಾವಷ್ಟಿ ಬರಬಹುದು, ಅಭಾವ ಬರಬಹುದು ಈ ರಾಜ್ಯದಲ್ಲಿ ಶಾಂತಿ ಭಂಗ ಆಗಬಹುದು. ಹೀಗೆ ಅಭಾವ ಪರಿಸ್ಥಿತಿಯಿಂದ ಉದ್ಭವವಾಗತಕ್ಕ ನಮ್ಮ ರಾಜ್ಯಕ್ಕೆ ತೊಂದರೆಯಾಗತಕ್ಕ ಪರಿಸ್ಥಿತಿ, ಹಿಂಸಾಕೃತ್ಯಗಳು ನಡೆಯತಕ್ಕ ಪರಿಸ್ಥಿತಿ ಈ ಪ್ರಕೃತಿ ವಿಕೋಪದಿಂದ ನಡೆಯುತ್ತಿದೆ...

ಛೇರ್ಮನ್.—ತಾವು ದಯಮಾಡಿ, ಇನ್ನು ೫ ನಿಮಿಷದಲ್ಲಿ ಮುಗಿಸಿಬಿಡಿ...

ಶ್ರೀ ಕೆ. ಲಕ್ಕಪ್ಪ.—ಆದ್ದರಿಂದ ಇಂತಹ ಪರಿಸ್ಥಿತಿಯನ್ನು ತಪ್ಪಿಸಲು ಒಂದು ಶಾಶ್ವತವಾದ ಪರಿಹಾರ ವ್ಯವಸ್ಥೆಯನ್ನು ನಮ್ಮ ಸರ್ಕಾರ ಇನ್ನೂ ಕೈಗೊಂಡಿಲ್ಲ. ಬಹುಶಃ ನಾನು ೧೯೬೨ನೇ ಇಸವಿಯಲ್ಲಿ ಈ ಸಭೆಯಲ್ಲಿಯೇ ಒಂದು ನಾನ್‌ಅಫಿಷಿಯಲ್ ರೆಸೂಲ್ಯೂಷನ್ ತಂದಿದ್ದೆ ಆಗಲೂ ಇದೇ ಭಾಷಣ ಈಗಲೂ ಅದೇ ಭಾಷಣ. ಈ ಸದಸ್ಯರೆಲ್ಲರೂ ಹೇಳತಕ್ಕಂತಾದ್ದು ಅದೇ ಭಾಷಣ ಮಳೆ ಬಂದಿಲ್ಲ, ನಮಗೆ ಹಣ ಕೊಡಿ ಎಂಬುದು ಇದು ಶಾಶ್ವತ ಪರಿಹಾರ ಆಲ್ಲವೇ ಆಲ್ಲ. ಶಾಶ್ವತ ಪರಿಹಾರ ಮಾಡತಕ್ಕ ಮಾರ್ಗವನ್ನು ಇದುವರೆಗೂ ಯಾವ ಸರ್ಕಾರವೇ ಆಗಲೀ, ಹಿಂದಿನ ಸರ್ಕಾರವಾಗಲೀ, ಈಗಿನ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲೀ ಈಗಿನ ವ್ಯವಸ್ಥೆಗೆ ಸರಿಯಾದ ಪರಿಹಾರವನ್ನು ಕಂಡುಹಿಡಿಯಂತಿಲ್ಲ. ನೈಸರ್ಗಿಕವಾಗಿ ಮಳೆ ಬಂದರೂ ಸಹ ಪಶ್ಚಿಮಘಟ್ಟಗಳು ಆ ಮಳೆಯನ್ನು ತಡೆದಜಿಡುತ್ತವೆ.ನಮ್ಮ ರಂಗನಾಥ ಸಾಹೇಬರು ಒಂದು ಸಾರಿ ಹೇಳುತ್ತಿದ್ದರು.ಪಶ್ಚಿಮ ಘಟ್ಟಗಳ ತಲೆ ತೆಗೆದರೆ ನಮಗೆಲ್ಲ ಒಳ್ಳೆಯ ಮಳೆ ಬರುತ್ತದೆಂದು ಅಂದರೆ ಹಳೆಯ ಮೈಸೂರು ಭಾಗಕ್ಕೆ ಪಶ್ಚಿಮ ಘಟ್ಟಗಳಲ್ಲಿ ಬೆಟ್ಟಗಳನ್ನು ಕತ್ತರಿಸಿದರೆ ನಮಗೆಲ್ಲ ಒಳ್ಳೆಯ ಮಳೆ ಬರುತ್ತದೆ. ಇದೂ ಸಾಧ್ಯವಾಗುತ್ತದೆಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ಈ ರಾಜ್ಯದ ಅಭಾವ ಪರಿಸ್ಥಿತಿ ಬಗ್ಗೆ ನಾವು ಏನು ಭಾಷಣ ಮಾಡುತ್ತಿದ್ದೇವೆ ಇದಕ್ಕೆ ಒಂದು ಶಾಶ್ವತ ಪರಿಹಾರ ವ್ಯವಸ್ಥೆ ಮಾಡುವುದಕ್ಕೆ ಒಂದು ಕಮೀಷನ್ ನೇಮಕ ಮಾಡಬೇಕು ಈ ಕಮೀಷನ್ ಮಾಡಿ ಶಾಶ್ವತ ಅಥಾರಿಟಿಯನ್ನು ಇಟ್ಟು ಅಲ್ಲಿಗೆ ಹಣವನ್ನು ಒದಗಿಸಿ, ಎಲ್ಲಲ್ಲಿ ನೀರಿನ ವ್ಯವಸ್ಥೆ ಇದೆ ಅದನ್ನೆಲ್ಲಾ ಒಳಪಡಿಸಿ ಶಾಶ್ವತವಾದ ಯೋಜನೆಗಳನ್ನು ಹಾಕಬೇಕು ಈ ಯೋಜನೆಗಳನ್ನು ಹಾಕದೇಹೋದರೆ. ಬಹುಶಃ ಪ್ರತಿವರ್ಷ ಯಾರಾದರು ಮಳೆ ಬರದಿದ್ದರೆ ಈ ಅಧಿವೇಶನದಲ್ಲಿ ನಾವು ಅಭಾವ ಪರಿಸ್ಥಿತಿ ಮೇಲೆ ಚರ್ಚೆ ಮಾಡುತ್ತೇವೆ, ಅವಕಾಶ ಮಾಡಿಕೊಡಿ ಎಂದು ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇವೆ, ಅವರು ಒಂದು ಅವಕಾಶ ಮಾಡಿಕೊಡುತ್ತಾರೆ. ನಾವು ಒಂದು ಗಂಟೆ ಅಥವಾ

ಒಂದೂವರೆ ಗಂಟೆ ಭಾಷಣ ಮಾಡಿ ಹೋಗುತ್ತೇವೆ ಆದರೆ ಪರಿಸ್ಥಿತಿಯನ್ನು ನಾವು ಅರ್ಥ ಮಾಡಿಕೊಳ್ಳಬೇಕು ಆದ್ದರಿಂದ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ ಏನೆಂದರೆ ಈ ಅಭಾವ ಪರಿಸ್ಥಿತಿ ಬಗ್ಗೆ ಕೇವಲ ಒಣ ಭಾಷಣ ಮಾಡದೆ ಶಾಶ್ವತ ಪರಿಹಾರ ಪರಿಸ್ಥಿತಿ ಬಗ್ಗೆ ಕಮೀಷನ್ ನೇಮಕ ಮಾಡುವುದಕ್ಕೆ ಸರ್ಕಾರವನ್ನು ಒತ್ತಾಯ ಮಾಡದೇ ಹೋದರೆ, ಈ ಬರಗಾಲವನ್ನು ಎದುರಿಸುವುದು ಬಹಳ ಕಷ್ಟವಾಗುತ್ತದೆ.

(ಶ್ರೀ ಎಸ್.ಎಂ. ಕೃಷ್ಣರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಆದುದರಿಂದ ಈ ಒಂದು ಶಾಶ್ವತ ಪರಿಹಾರಕ್ಕಾಗಿ ನೀವು ಒಂದು ಕಮಿಷನ್ ಅನ್ನು ನೇಮಕ ಮಾಡಬೇಕು ಈ ಅಭಾವ ಪರಿಸ್ಥಿತಿ ಈ ರಾಜ್ಯದ ಯಾವ ಭಾಗದಲ್ಲಾಗಲೀ ಆಗಿದ್ದಾಗ್ಗೆ ಬಾರದ ರೀತಿಯಲ್ಲಿ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಕಳಕಳಿಯಿಂದ ನಾನು ಮನವಿ ಮಾಡುತ್ತೇನೆ. ಜೊತೆಗೆ ಈ ಅಭಾವ ಪರಿಸ್ಥಿತಿ ಬಗ್ಗೆ ಬಹಳ ಹಣದಂರುಪಯೋಗವಾಗುತ್ತಿದೆ ಏತಕ್ಕೆಂದರೆ ಕೊಟ್ಟಿರತಕ್ಕಂಥ ಹಣ ಬಹಳ ಕಡಿಮೆ ತುಮಕೂರು ಜಿಲ್ಲೆಗೆ ೩೮ ಲಕ್ಷ ಕೊಟ್ಟಿದ್ದೀರಿ ಇದು ಡ್ರಿಂಕಿಂಗ್ ವಾಟರ್‌ಗೆ ಈ ೩೮ ಲಕ್ಷ ರೂಪಾಯಿನಿಂದ ನಮ್ಮ ಜಿಲ್ಲೆಯಲ್ಲಿ ಎಷ್ಟು ಡ್ರಿಂಕಿಂಗ್ ವಾಟರ್ ವೆಲ್ಸ್ ಮಾಡಬಹುದು ಎಷ್ಟು ಬೋರ್‌ವೆಲ್ಸ್ ಕೊರೆಯಬಹುದು ? ಒಂದು ಬೋರ್‌ವೆಲ್‌ಗೆ ೨೦ ರಿಂದ ೨೫ ಸಾವಿರ ರೂಪಾಯಿ ಬೇಕಾಗುತ್ತದೆ ಎಲ್ಲಾ ಕಡೆ ಬೋರ್‌ವೆಲ್ಸ್ ಕೊರೆಯುವುದಕ್ಕೆ ಕೂಡ ಆಗುವುದಿಲ್ಲ. ಕುಡಿಯುವ ನೀರಿನ ವ್ಯವಸ್ಥೆಗಾಗಿ ೩೮ ಲಕ್ಷ ರೂಪಾಯಿ ಕೊಟ್ಟಿದ್ದೀರಿ ಸಪ್ಲೈ ಆಫ್ ಫಾಡರ್ ಒಂದು ಜಿಲ್ಲೆಗೆ ೨ ಲಕ್ಷ ಕೊಟ್ಟಿದ್ದೀರಿ ಇದೇ ರೀತಿ ಎಲ್ಲಾ ಜಿಲ್ಲೆಯಲ್ಲೂ ನಾನು ನೋಡಿದೆ. ಕೆಲವು ದೊಡ್ಡ ಜಿಲ್ಲೆಗಳು ಇವೆ ಕೆಲವು ಮಿಡಿಯಂ ಜಿಲ್ಲೆಗಳು ಇವೆ ಇಲ್ಲೆಲ್ಲಾ ಕೊಟ್ಟಿರತಕ್ಕಂಥ ಹಣ ಬಹಳ ಕಡಿಮೆ ಇದೆ ಈ ಹಣದಿಂದ ಯಾವ ವ್ಯವಸ್ಥೆ ಕೂಡಾ ಆಗುವುದಿಲ್ಲ. ರಸ್ತೆ ಮಾಡಿಸಬೇಕೆಂದರೆ ಆ ಊರಿನ ವರಿಗೆ ಕೂಲಿ ಸಿಗಬೇಕೆಂದರೆ, ಏಂಪ್ಲಾಯ್‌ಮೆಂಟ್ ಜನರೇಷನ್ ಸ್ಕೀಮ್ ಮಾಡಬೇಕು ಇದಕ್ಕೆ ಎಷ್ಟು ಕೊಟ್ಟಿದ್ದೀರಿ ಎಂದರೆ ೭೩ ಲಕ್ಷ ಕೊಟ್ಟಿದ್ದೀರಿ ೭೩ಲಕ್ಷದಿಂದ ಎಂಪ್ಲಾಯ್‌ಮೆಂಟ್ ಜನರೇಷನ್ ಸ್ಕೀಮ್ ಎಲ್ಲಿ ಮಾಡುವುದಕ್ಕೆ ಆಗುತ್ತದೆ ಮಂಡ್ಯ ಜಿಲ್ಲೆಯಲ್ಲಿ ಅಷ್ಟೊಂದು ಅಭಾವ ಇಲ್ಲ ಏಂದು ಕಾಣುತ್ತದೆ. ನಾಗಮಂಗಲ ತಾಲ್ಲೂಕನ್ನು ಬಿಟ್ಟರೆ ಬೇರೆಡೆ ಅಷ್ಟು ಅಭಾವ ಇಲ್ಲ.

ಅಧ್ಯಕ್ಷರು.—ತಾವು ಸೋಮವಾರ ಭಾಷಣ ಮುಂದುವರಿಸಬಹುದು. ಈಗ ನಾನ್ ಆಫಿಷಿಯಲ್ ಬಿಸಿನೆಸ್ ತೆಗೆದುಕೆ ಳ್ಳೋಣ. ಪ್ರೊಫೆಸರ್ ನಂಜುಂಡಸ್ವಾಮಿ ಮತ್ತು ಟಿ.ಎಂ. ವಿರಂಜುನಾಥ್‌ರವರು ತಮ್ಮ ತಮ್ಮ ವಿಧೇಯಕಗಳನ್ನು ಮಂಡಿಸಬಹುದು.

ಖಾಸಗಿ ಕಾರ್ಯಕಲಾಪಗಳು

ಖಾಸಗಿ ಸದಸ್ಯರ ವಿಧೇಯಂಕಗಳು

೧. ೧೯೯೦ನೇ ಇಸವಿಯ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಂಕ

ಮಂಡನೆಗೆ ಅನುಮತಿ ಕೋರಿಕೆ

ಪ್ರೊ: ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ, ೧೯೯೦ನೇ ಇಸವಿಯ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಂಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ

> ೧೯೯೦ನೇ ಇಸವಿಯ ಭಾರತೀಯ ದಂಡಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಂಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು.

(ಪ್ರಸ್ತಾವ ಅಂಗೀಕೃತವಾಯಿತು, ವಿಧೇಯಂಕವನ್ನು ಮಂಡಿಸಲು ಅನುಮತಿ ನೀಡಲಾಯಿತು)